


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

RNI REG No. : KARKAN/2016/75068

Volume : 07 Issue : 302 Friday 15-08-2025 E-mail : maruti.b.hosamani76@gmail.com Page: 4 Price : Rs. 1/-


## ಹೃದಯದಿ ಮೊಳಗಲಿ ವಂದೇ ಮಾತರಂ

**(79 ನೇ. ಸ್ವಾತಂತ್ರ್ಯೋತ್ಸವದ ಶುಭಾಶಯಗಳು)**




ಮತ್ತೆ ಬಂದಿದೆ ಸಂಭ್ರಮದ ಸ್ವಾತಂತ್ರ್ಯ ದಿನವು
ಹಾರಲಿ ಕೆಂಪು ಕೋಟೆಯ ಮೇಲೆ ತಿರಂಗವು
ಅರ್ಪಿಸೋಣ ಭಾರತ ಮಾತೆಗೆ ಸ್ವಾತಂತ್ರ್ಯದ ಹೋರಾಟವು
ಹೇಳಲಿ ವಂದೇ ಮಾತರಂ ಪ್ರತಿ ಹೃದಯವು
ಸಿಗಲಿ ಸ್ವಾತಂತ್ರ್ಯ ರೈತ ಬೆಳೆದ ಬೆಳೆಗಳಿಗೆ
ಸಿಗಲಿ ಸ್ವಾತಂತ್ರ್ಯ ವರದಕ್ಷಿಣೆ ಕೊಡುವ ಹೆತ್ತವರಿಗೆ
ಸಿಗಲಿ ಸ್ವಾತಂತ್ರ್ಯ ಭ್ರಷ್ಟಾಚಾರಕ್ಕೆ ಒಳಗಾಗುವ ಅಮಾಯಕರಿಗೆ
ಸಿಗಲಿ ಸ್ವಾತಂತ್ರ್ಯ ಒಂಟಿಯಾಗಿ ತಿರುಗುವ ಹೆಣ್ಣು ಮಕ್ಕಳಿಗೆ
ಭಾರತದ ವೈಭವ ಕೇಸರಿ ಬಿಳಿ ಹಸಿರು ಧ್ವಜದಲಿ
ನಿತ್ಯ ವಂದೇ ಮಾತರಂ ಹೃದಯದಿಂದ ಮೊಳಗಲಿ
ನಮ್ಮ ಬಾವುಟ ಸೂರ್ಯನ ಹೊಂಗಿರಣದಂತೆ ಹೊಳೆಯುತ್ತಿರಲಿ
ಇಡೀ ವಿಶ್ವದಲ್ಲಿಯೇ ಭಾರತ ಶ್ರೇಷ್ಠ ಗುರುವಾಗಲಿ
ಸ್ವಾತಂತ್ರ್ಯ ದಿನ ಮೀಸಲಿರದಿರಲಿ ಕೇವಲ ಒಂದು ದಿನಕ್ಕೆ
ಸ್ಮರಿಸಿ ಸ್ವಾತಂತ್ರ್ಯ ಹೋರಾಟಗಾರರನ್ನು ಪ್ರತಿ ಕ್ಷಣಕ್ಕೆ
ಅವರ ನೆನಪು ಆಗದಿರಲಿ ಕೇವಲ ಪೊಳ್ಳು ಭಾಷಣಕ್ಕೆ
ಬೆಳೆಸಿ ಉಳಿಸಿ ಸಂಸ್ಕೃತಿ ಪರಂಪರೆ ಪ್ರತಿ ಜನ್ಮಕ್ಕೆ
ದೇಶ ಸೇವೆಯೇ ಈಶ ಸೇವೆ ಎನ್ನುವ
ಹುತಾತ್ಮರಾದ ರಾಷ್ಟ್ರ ನಾಯಕರನ್ನು ನಿತ್ಯ ಸ್ಮರಿಸುವ
ಉಳಿಸಿ ಬೆಳೆಸಿರಿ ವಿದ್ಯಾರ್ಥಿಗಳಲ್ಲಿ ದೇಶಾಭಿಮಾನವ
ಮುಡಿಪಾಗಿರಲಿ ದೇಶದ ಅಭಿವೃದ್ಧಿಗೆ ನಮ್ಮ ಜನ್ಮವ
ಸ್ಮರಿಸೋಣ ಮಾಡು ಇಲ್ಲವೇ ಮಡಿ ಎಂದ ಗಾಂಧೀಜಿಯನು
ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು ಎಂದ ತಿಲಕರನು
ಇಂಕ್ವಿಲಾಬ್ ಜಿಂದಾಬಾದ್ ಎಂದ ಭಗತ್ ಸಿಂಗ್ ರನು
ಜೈ ಹಿಂದ್ ಎಂದಿರುವ ಸುಭಾಷ್ ಚಂದ್ರ ಬೋಸ್ ರನು

**ಶ್ರೀ ಮುತ್ತು ಯ ವಡ್ಡರ ಶಿಕ್ಷಕರು, ಹಿರೇಮಾಗಿ ಬಾಗಲಕೋಟ/9845568484**

## ಪಟ್ಟಣದಲ್ಲಿ ಬೈಕ್ ನಲ್ಲಿ ತ್ರೀವರ್ಣ ಧ್ವಜ–ಸಹಿತ ಬೈಕ್ ರ್ಯಾಲಿ



**ಸಿಹಿ ಕಹಿ ಸುದ್ದಿ,**
**ಮಾನ್ವಿ:** ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 78 ವರ್ಷ ಗತಿಸಿದ ಹಿನ್ನೆಲೆಯಲ್ಲಿ ಮಾನ್ವಿ ಬಿಜೆಪಿ ಮಂಡಲ ಯುವ ಮೋರ್ಚಾ ಬಳಗದಿಂದ ತ್ರೀವರ್ಣ ಧ್ವಜಗಳನ್ನು ಬೈಕ್ ನಲ್ಲಿ ಕಟ್ಟಿಕೊಂಡು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ರ್ಯಾಲಿ ನಡೆಸಿದರು.



ಭಾರತ ದೇಶದ ಪ್ರತಿಯೊಬ್ಬ ನಾಗರೀಕನು ಸಹ ದೇಶಕ್ಕಾಗಿ ಮಡಿದ ತ್ರೀವರ್ಣ ಧ್ವಜದ ಮಹತ್ವದ ಜೊತೆಗೆ ದೇಶ ಪ್ರೇಮ ಇರಬೇಕೆಂಬ ಕಲ್ಪನೆ ಯಡಿಯಲ್ಲಿ ರ್ಯಾಲಿ ನಡೆಸಲಾಗುತ್ತದೆ ಎಂದು ಮಾಜಿ ಶಾಸಕ ಗಂಗಾಧರ ನಾಯಕ ತಿಳಿಸಿದರು.
ಭಾರತ ದೇಶದ ಪ್ರತಿಯೊಬ್ಬರು ತಮ್ಮ ಮನೆಗಳ ಮೇಲೆ ಹರ್ ಘರ್ ತಿರಂಗ ಸಂದೇಶದ ಜೊತೆಗೆ ಮನೆಯ ಮೇಲೊಂದು ಭಾವುಟ ಹಾರುವಂತೆ ಮಾಡಬೇಕು ಎಂದು ಬಿಜೆಪಿ ಯುವ ಮುಖಂಡರು ತಿಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ವಿದ್ಯಾರ್ಥಿಗಳು ಉತ್ತಮ ನೈತಿಕ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಬೆಳೆಸಿ ಕೊಳ್ಳಬೇಕು: ಉಪನ್ಯಾಸಕ ಎಂ.ಟಿ ಆರೇರ್







**ಸಿಹಿ ಕಹಿ ಸುದ್ದಿ,**
**ಹುಲ್ಲೂರು :** ಜೀವನದಲ್ಲಿ ಶಿಕ್ಷಣದ ಮಹತ್ವ ಅಪಾರ. ಇದು ವಿದ್ಯಾರ್ಥಿಗಳಿಗೆ ಅವರ ಜೀವನದುದ್ದಕ್ಕೂ ಗುಣಮಟ್ಟದ ಕಲಿಕೆಯನ್ನು ಸುಗಮ ಗೊಳಿಸುತ್ತದೆ. ಇದು ಜ್ಞಾನ, ನಂಬಿಕೆ, ಕೌಶಲ್ಯ, ಮೌಲ್ಯಗಳು ಮತ್ತು ನೈತಿಕ ಅಭ್ಯಾಸಗಳನ್ನು ಮೈಗೂಡಿಸಿ ಕೊಳ್ಳುತ್ತದೆ. ಇದು ಜೀವನ ವಿಧಾನವನ್ನು ಸುಧಾರಿಸುತ್ತದೆ ಮತ್ತು ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುತ್ತದೆ. ಶಿಕ್ಷಣವು ಜೀವನವನ್ನು ಉತ್ತಮ ಮತ್ತು ಹೆಚ್ಚು ಶಾಂತಿಯುತ ವಾಗಿಸುತ್ತದೆ. ಇದು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಪರಿವರ್ತಿಸುತ್ತದೆ ಮತ್ತು ಅವರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುತ್ತದೆ ಎಂದು ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯ ಹುಲ್ಲೂರು ಉಪನ್ಯಾಸಕರಾದ ಎಂ.ಟಿ ಆರೇರ್ ಮಾತನಾಡಿದರು.
ಶ್ರೀ ಕಲ್ಮೇಶ್ವರ ಪ್ರೌಢ ಶಾಲೆ ಹುಲ್ಲೂರಿನಲ್ಲಿ 2025–26 ನೇ. ಸಾಲಿನ ಶಾಲಾ ಸಂಸತ್ ಉದ್ಘಾಟನೆ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆ ಸ್ಥಾನವನ್ನು ಶರಣಪ್ಪ ಅಂಗಡಿಯವರು ವಹಿಸಿದ್ದರು ಕಾರ್ಯಕ್ರಮದ ಉದ್ಘಾಟಕರಾಗಿ ವೈ. ಎಂ ಮಕ್ಕಣ್ಣವರ್. ಮುಖ್ಯ ಅತಿಥಿಗಳಾಗಿ ಬಸವರಾಜ್ ಮೆಣಸಗಿ, ಬಸವರಾಜ್ ಗಾಣಿಗೇರ, ಅಂದಪ್ಪ ಪುರದ್. ವಹಿಸಿದ್ದರು.
ಈ ಕಾರ್ಯಕ್ರಮದ ನಿರೂಪಣೆಯನ್ನು ವಾಯ್. ಎಚ್ ಕಟ್ಟನ್ನವರ್ ಗುರುಗಳು. ಈ ಕಾರ್ಯಕ್ರಮದಲ್ಲಿ ಸ್ವಾಗತವನ್ನು ಬಿ.ಲಮಾಣಿಯವರು ಹಾಗೂ ಪ್ರಾಸ್ತಾವಿಕ ನುಡಿಯನ್ನು ವಿ.ಎಲ್ ಮಾನೆ ಗುರುಗಳು. ವಂದನಾರ್ಪಣೆಯನ್ನು ಶ್ರೀಮತಿ ವಿ.ವಿ ರಾಠೋಡ್ ನೆರವೇರಿಸಿದರು.
ಅದೇ ರೀತಿಯಾಗಿ ಕಲ್ಮೇಶ್ವರ ಪ್ರೌಢ ಶಾಲೆ ಹುಲ್ಲೂರು ಶಾಲೆಯ ಸ್ಥಾನಿಕ ಆಡಳಿತ ಮಂಡಳಿ ಸರ್ವ ಸದಸ್ಯರು, ಸಿಬ್ಬಂದಿ ವರ್ಗ ಕುಮಾರಿ ಎ.ಎಸ್ ದಲ್ಬಂಜನ್. ಎಚ್.ವಿ ಮಳಲಿ. ವೈ.ಜಿ ಭಜಂತ್ರಿ. ಎಸ್.ಆರ್ ವಡ್ಡರ್, ವಿ.ಎಸ್ ಹಿರೇಹಾಳ್, ಅಜ್ಜಪ್ಪ ಕೆಂಚನಗೌಡ್ರು ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ ರೋಣ.ಗದಗ**

## ಸ್ವರ್ಗ–ನರಕ ಮಾನವ ನಿರ್ಮಿತ ಕಾಲ್ಪನಿಕ ತಾಣಗಳು: ಶಾಮ ಘಾಟಗೆ


**ಜಮಖಂಡಿ:** ಸ್ವರ್ಗ–ನರಕ ಬೇರೆ ಎಲ್ಲಿಯೂ ಇಲ್ಲ. ಅವು ಮಾನವನು ಸೃಷ್ಟಿಸಿದ ಕಾಲ್ಪನಿಕ ತಾಣಗಳು. ಸತ್ಯವಂತರಾಗಿ ದಯೆ ಮತ್ತು ಸಹಾನುಭೂತಿಯಿಂದ ಧರ್ಮದ ಹಾದಿಯಲ್ಲಿ ಸಾಗಿ ಅನುಭವಿಸುವ ಸಂತೋಷವೇ ಸ್ವರ್ಗ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಘಟಕದ ಸಂಚಾಲಕ ಶಾಮರಾವ್ ಘಾಟಗೆ ಹೇಳಿದರು.
ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಜರುಗುತ್ತಿರುವ ಓಣಿಗೊಂದು ದಿನ ವಚನ ಶ್ರಾವಣ ಅಂಗವಾಗಿ, ಇಲ್ಲಿನ ಮುಧೋಳ ದಿನ್ನಿಯ ಪಕ್ಕದ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಗುರುವಾರ ಸಂಜೆ ನಡೆದ ಹದಿನಾಲ್ಕನೇ ದಿನದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು 'ಆಚಾರವೇ ಸ್ವರ್ಗ ಅನಾಚಾರವೇ ನರಕ'




ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.
ಅಸತ್ಯ,ಅಧರ್ಮ,ಅನೈತಿಕತೆಯಿಂದನಡೆದು ಇತರರ ಮನಸ್ಸನ್ನು ಘಾಸಿಗೊಳಿಸುವುದು. ಅನ್ಯಾಯ, ಅತ್ಯಾಚಾರ, ಅನಾಚಾರ ಎಸಗುವುದು. ತಪ್ಪು ದಾರಿಯಲ್ಲಿ ಸಾಗಿ ತಾವೇ ನಿರ್ಮಿಸಿಕೊಂಡ ಬಲೆಯಲ್ಲಿ ಸಿಲುಕಿಕೊಂಡು ಪಡುವ ಸಂಕಟಮಯ ಜೀವನವೇ ನರಕ ಎಂದರು.
ಓಲೆಮಠದ ಆನಂದ ದೇವರು ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿ, ಭಗವಂತ ಕೊಟ್ಟಿರುವ ಮನುಷ್ಯ ಜನ್ಮದಲ್ಲಿ ಎಲ್ಲವನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳಬೇಕು. ಎಲ್ಲರೊಂದಿಗೆ ಹೊಂದಿಕೊಂಡು ಹೋಗಬೇಕು.
ಗಂಗೆಯಲ್ಲಿ ಮಿಂದೆದ್ದರೆ ಅಥವಾ ಢಣಢಣ ಗಂಟೆ, ಜಾಗಟೆ ಬಾರಿಸಿದರೆ ಸ್ವರ್ಗ ಸಿಗುವುದಿಲ್ಲ. ಒಳ್ಳೆಯ ವಿಚಾರಗಳನ್ನು ಇಟ್ಟುಕೊಂಡಾಗ ಸ್ವರ್ಗ ನಮ್ಮಲ್ಲಿಯೇ ನಿರ್ಮಾಣ ಆಗುತ್ತದೆ ಎಂದು ಆಶೀರ್ವಚನ ನೀಡಿದರು.
ಎಸ್. ವೈ. ಪಾಟೀಲ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸರಸ್ವತಿ ಸಬರದ (ಹೆಗಡಿ), ಗೋಪಾಲ ತುಳಜಾಪೂರ ಸಂಗೀತ ಸೇವೆ ಸಲ್ಲಿಸಿದರು. ರವಿ ತೇಲಿ ನಿರೂಪಿಸಿದರು.

## ರಬಕವಿ–ಬನಹಟ್ಟಿ: ಮೂರು ಸೆಂ.ಮೀ. ಮಳೆ ತೋಟ ಮತ್ತು ಹೊಲಗಳಲ್ಲಿ ನುಗ್ಗಿದ ಭಾರಿ ಪ್ರಮಾಣದ ನೀರು

**ರಬಕವಿ–ಬನಹಟ್ಟಿ :** ಅವಳಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಗುರುವಾರ ಸಂಜೆ ಮತ್ತು ಶುಕ್ರವಾರ ಮಧ್ಯಾಹ್ನದ ವೇಳೆಯಲ್ಲಿ ಭಾರಿ ಮಳೆ ಸುರಿಯಿತು.
ರಬಕವಿ ಬನಹಟ್ಟಿ ಅವಳಿ ನಗರಗಳಲ್ಲಿ ಅಂದಾಜು ಮೂರು ಸೆಂ.ಮೀ. ಕ್ಕಿಂತಲೂ ಹೆಚ್ಚು ಮಳೆಯಾದ ವರದಿಯಾಗಿದೆ.
ಭಾರಿ ಮಳೆಯಿಂದಾಗಿ ಸಮೀಪದ ಹೊಸೂರಿನ ತೋಟದಲ್ಲಿ ನಿಂತ ನೀರು ಹಳ್ಳದಂತೆ ಹರಿಯ ತೊಡಗಿ–ತು.



ಸುತ್ತಮುತ್ತಲಿನಬಹುತೇಕಹೊಲಮತ್ತುತೋಟಗಳಲ್ಲಿ ನೀರು ನಿಂತುಕೊಂಡಿದೆ. ಮಳೆಯಿಂದಾಗಿ ನಗರದ ಬಹುತೇಕ ತಗ್ಗು ಪ್ರದೇಶಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿದೆ. ಮಳೆಯಿಂದಾಗಿ ವರಮಹಾಲಕ್ಷ್ಮಿ ಪೂಜೆಗೆ ಪೂಜಾ ವಸ್ತುಗಳನ್ನು ಖರೀದಿಸಲು ಬಂದ ಮಹಿಳೆಯರಿಗೆ, ರಾಖಿ ಹಬ್ಬಕ್ಕೆ ರಾಖಿ ಖರೀದಿ ಮಾಡಲು ಬಂದಂತಹ ಮಹಿಳೆಯ–ರಿಗೆ ಮತ್ತು ರೈತಾಪಿ ವರ್ಗಕ್ಕೂ ಕೂಡ ಬಹಳಷ್ಟು ತೊಂದರೆಯಾಯಿತು.

## ಆ.18 ರಂದು ತೇರದಾಳದ ಪ್ರಭುದೇವರ ಜಾತ್ರಾ ಮಹೋತ್ಸವ

**ತೇರದಾಳ :** ಆಗಸ್ಟ 18 ರಂದು ತೇರದಾಳ ಕ್ಷೇತ್ರಾಧಿಪತಿ ಅಲ್ಲಮ ಪ್ರಭುದೇವರ ಜಾತ್ರೆ ನಡೆಯಲಿದ್ದು, ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನಕ್ಕೆ, ಜಾತ್ರೆಗೆ ಬರುವಾಗ ಮಹಿಳೆಯರು ಚಿನ್ನದ ಆಭರಣಗಳನ್ನು ಧರಿಸಿಕೊಂಡು ಹೋಗಬಾರದು. ಕಾರಣ ಸರಗಳ್ಳರು ಜಾತ್ರೆಯಲ್ಲಿ ಹೆಚ್ಚಾಗಿ ಬರುತ್ತಾರೆಂದು ಬನಹಟ್ಟಿ ಸಿಪಿಐ ಸಂಜೀವ ಬಳಗಾರ ಹೇಳಿದರು.
ಇಲ್ಲಿನ ಪೇಟೆ ಭಾಗದ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ನಡೆದ ಜಾತ್ರೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.
ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನಕ್ಕೆ ಬರುವ ಭಕ್ತಾಧಿಗಳಿಗೆ ಹಾಗೂ ದೀಢ




ನಮಸ್ಕಾರ ಹಾಕುವವರಿಗೆ ದಾರಿಗಳನ್ನು ಸ್ವಚ್ಛತೆಗೊಳಿಸಬೇಕು. ಬೀದಿ ದೀಪಗಳನ್ನು ಎಲ್ಲೆಡೆ ಅಳವಡಿಸಬೇಕು. ಸಾರ್ವಜನಿಕರು ಕೂಡ ಬಯಲು ಶೌಚಕ್ಕೆ ಹೋಗಬಾರದು. ದೇವಸ್ಥಾನ ಹತ್ತಿರ ವಾಹನಗಳು ನಿಲ್ಲದಂತೆ ಹಾಗೂ ದೇವಸ್ಥಾನ ಆವರಣದಲ್ಲಿ ಸಿ.ಸಿ. ಕ್ಯಾಮೆರಾ ಅಳವಡಿಸಬೇಕೆಂದು ಹಲವು ಮುಖಂಡರು ಸಲಹೆ ನೀಡಿದರು.
ಮುಖ್ಯಾಧಿಕಾರಿ ಎಫ್. ಬಿ. ಗಿಡ್ಡಿ, ಪಿಎಸ್ಐ ಎಸ್. ಕೆ. ಸಿಂಗನ್ನವರ ಹಲವು ಸಲಹೆಗಳನ್ನು ನೀಡಿದರು.
ಹಿರಿಯರಾದ ನಿಂಗಪ್ಪಣ್ಣ ಮಾಲಗಾಂವಿ, ಬಸಪ್ಪ ಮುಕರಿ, ಭೀಮಗೊಂಡ ಸದಲಗಿ, ರಮೇಶ ಧರೆನ್ನವರ, ಆನಂದ ನಡುವಿನಕೇರಿ, ಅಪ್ಪು ಮಂಗಸೂಳಿ, ಶಂಕರ ಕುಂಬಾರ, ಸಚಿನ ಕೊಡತೆ, ಮಹೇಶ ಹಂಜಿ, ಸಾಗರ ಸಪ್ತಸಾಗರ, ವರ್ಧಮಾನ ಕಡಹಟ್ಟಿ, ರಾಜು ಹೊಸಮನಿ, ಸುಭಾಸ ಗಾತಾಡೆ, ಪರಪ್ಪ ಅಥಣಿ, ಪರಪ್ಪ ಕಾಲತಿಪ್ಪಿ, ಈಶ್ವರ ಕಿತ್ತೂರ, ಮಹಾಂತೇಶ ಪಂಚಾಕ್ಷರಿ, ಕಾಡದೇವರಮಠ,ನಿರಂಜನ ಬಾವಿ ಹಾಗೂ ಅನ್ನಪ್ರಸಾದ ಸಮಿತಿಯವರು ದೇವಸ್ಥಾನದ ಅರ್ಚಕರು ಭಾಗವಹಿಸಿದ್ದರು.

## ತೇರದಾಳ ಪಶ್ಚಿಮ ವಲಯದ ಕ್ರೀಡಾಕೂಟ: ಮಾನಸಿಕ ಹಾಗೂ ಶಾರೀರಿಕ ಸದೃಢತೆಗೆ ಕ್ರೀಡೆ ಅವಶ್ಯ

**ತೇರದಾಳ :** ವಿದ್ಯಾರ್ಥಿ ಜೀವನದಲ್ಲಿಯೇ ಶರೀರದ ಬಗ್ಗೆ ಕಾಳಜಿ ಅಗತ್ಯವಾಗಿದ್ದು, ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ಹಾಗೂ ಶಾರೀರಿಕ ಸ್ಥಿತಿ ಸದೃಢಗೊಳ್ಳುತ್ತದೆ ಎಂದು ಬಿಇಓ ಎ. ಕೆ. ಬಸಣ್ಣವರ ಹೇಳಿದರು.
ಇಲ್ಲಿನ ಸಿದ್ಧೇಶ್ವರ ವಿದ್ಯಾವರ್ಧಕ ಸಂಘದಲ್ಲಿ ಹಮ್ಮಿಕೊಂಡಿದ್ದ ಪಶ್ಚಿಮ ವಲಯದ ಹದಿನಾಲ್ಕು ವರ್ಷ ವಯೋಮಿತಿಯೊಳಗಿನ ಕ್ರೀಡಾಕೂಟದ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.
ವಿದ್ಯಾರ್ಥಿಗಳುಕೇವಲಹೆಚ್ಚಿನಅಂಕಗಳಿಸುವ ಉದ್ದೇಶ ಮಾತ್ರ ಹೊಂದಿರಬಾರದು. ಹೆಚ್ಚಿನ



ಅಂಕಪಡೆಯಬೇಕಾದರೂಕೂಡಮೊದಲು ನಾವು ಆರೋಗ್ಯವಂತರಾಗಿರಬೇಕು ಎಂಬುದನ್ನು ಅರಿತುಕೊಂಡು ಪಠ್ಯೇತರ ಚಟುವಟಿಕೆಗಳಲ್ಲಿಯೂ ಪಾಲ್ಗೊಳ್ಳುವಂತೆ ಕರೆ ನೀಡಿದರು.
ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ, ಸ್ವಾಮಿ ವಿವೇಕಾನಂದ ಸಿಬಿಎಸ್ಇ ಚೇರಮನ್ ಬಸವರಾಜ ಬಾಳಿಕಾಯಿ ಮಾತನಾಡಿದರು. ದೈಹಿಕ ಶಿಕ್ಷಕ ವಿಶ್ವನಾಥ ಉಪ್ಪಿನ ಪ್ರತಿಜ್ಞಾ ವಿಧಿ ಬೋಧಿಸಿದರು.
ಸಿದ್ಧೇಶ್ವರ ಪ್ರೌಢಶಾಲೆ ಚೇರಮನ್ ಮಹೇಶ ಹಂಜಿ, ಸಿಆರ್ಪಿಗಳಾದ ಆನಂದ ಮುಧೋಳ, ಮಹೇಶ ಸೋರಗಾಂವಿ, ಎ. ಎಸ್.ಐ. ಲಕ್ಷ್ಮಣ ಇಮ್ಮಡಿ, ಮಹಾವೀರ ನಂದಗಾಂವ, ಕೆ. ಡಿ. ಮಾಲಗಾಂವಿ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಐ. ಬಿ. ಬಾಗಲಕೋಟ ಇನ್ನಿತರರು ಉಪಸ್ಥಿತ–ರಿದ್ದರು.

## ತಾಯಿಯ ಹಾಲು–ಮಗುವಿಗೆ ಅಮೃತ: ಪ್ರೊ. ಜಯಶ್ರೀ ಇಟ್ಟಿ



**ಬಾಗಲಕೋಟೆ:** ವಿಶ್ವ ಸ್ತನ್ಯಪಾನ ಸಪ್ತಾಹದ ಅಂಗವಾಗಿ ಬಿ.ವಿ.ವಿ.ಎಸ್‌ನರ್ಸಿಂಗ್‌ವಿಜ್ಞಾನಮಹಾವಿದ್ಯಾಲಯದ ವತಿಯಿಂದ ಸ್ತನ್ಯಪಾನದ ಮಹತ್ವವನ್ನು ಸಾರುವ ಕಾರ್ಯಕ್ರಮವನ್ನು ಬಾಗಲಕೋಟೆ ತಾಲ್ಲೂಕಿನ ಕೌಲಪೇಟದಲ್ಲಿಯ ಅಂಗನವಾಡಿ ಕೇಂದ್ರ ಸಂಖ್ಯೆ 30ರಲ್ಲಿ ಆಯೋಜಿಸಲಾಗಿತ್ತು.
ಕಾರ್ಯಕ್ರಮದಅಧ್ಯಕ್ಷತೆಯನ್ನುಮಹಾವಿದ್ಯಾಲಯದ ಪ್ರಾಚಾರ್ಯೆ ಪ್ರೊ.ಜಯಶ್ರೀ ಇಟ್ಟಿಅವರುವಹಿಸಿದ್ದರು. ಬಳಿಕ ಮಾತನಾಡಿದ ಅವರು, "ತಾಯಿಯ ಎದೆ ಹಾಲು ಮಗುವಿಗೆ ಬಹುಮುಖ್ಯ. ಸ್ತನ್ಯಪಾನದಿಂದ ಮಗುವಿಗೆ ಶಕ್ತಿ, ರೋಗ ನಿರೋಧಕ ಶಕ್ತಿ ಮತ್ತು ಸಂಪೂರ್ಣ ಪೌಷ್ಟಿಕಾಂಶ ದೊರೆಯುತ್ತದೆ.
ಈ ಹಾಲು ಮಕ್ಕಳಿಗೆ ಸೈನಿಕ ಶಕ್ತಿಯಂತೆ ರಕ್ಷಣೆ ನೀಡುತ್ತದೆ. ತಾಯಿ ಹಾಲು
ನೀಡದಿದ್ದರೆ ಮಕ್ಕಳ ಆರೋಗ್ಯದ ಮೇಲೆ ದುಷ್ಪ–ರಿಣಾಮ ಬೀರುತ್ತದೆ" ಎಂದು ತಿಳಿಸಿದರು.
ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಬೋರಮ್ಮ ಸನಗೇರಿ ಮಾತನಾಡಿ, "ತಾಯಿಯ ಹಾಲು ಅಮೃತದಂತೆ. ಇದರಲ್ಲಿ ಪುಟ್ಟ ಮಗುವಿಗೆ ಬೇಕಾದ ಎಲ್ಲ ಪೌಷ್ಟಿಕಾಂಶಗಳು ಇದ್ದು, ಅದರ ಪಾನವು ಮಗುವಿನ ಅಭಿವೃದ್ಧಿಗೆ ನೆರವಾಗುತ್ತದೆ. ತಾಯಿ ಹಾಲು ನೀಡದ ಕಾರಣದಿಂದಲೇ ವಿಶ್ವದಾದ್ಯಂತ ಪ್ರತಿವರ್ಷ ಸುಮಾರು 1.4 ಮಿಲಿಯನ್ ಮಕ್ಕಳು ತಮ್ಮ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ," ಎಂದು ಆಳವಾಗಿ ವಿವ–ರಿಸಿದರು. ಉಪನ್ಯಾಸಕಿ ಕುಮಾರಿ ಸ್ವಾತಿ ಅವರು 2025ರ ಸ್ತನ್ಯಪಾನ ಅಭಿಯಾನದ ಪರಿಕಲ್ಪನೆಯನ್ನು ವಿವರಿಸುತ್ತಾ, ತಾಯಂದಿರಿಗೆ ಸುಸ್ಥಿರ ಬೆಂಬಲ ವ್ಯವಸ್ಥೆ ನೀಡುವ ಅಗತ್ಯವಿದೆ ಎಂಬ ಸಂದೇಶವನ್ನು ನೀಡಿದರು.
ಇದೇ ವೇಳೆ ಡಿಪ್ಲೋಮಾ ತೃತೀಯ ವರ್ಷದ ವಿದ್ಯಾರ್ಥಿಗಳು ಸ್ತನ್ಯಪಾನದ ಮಹತ್ವವನ್ನು ಸಾರುವ ಕಿರು ನಾಟಕವೊಂದನ್ನು ಪ್ರದರ್ಶಿಸಿದರು.
ಅಲ್ಲದೇ ತಾಯಿಯ ಹಾಲು ನೀಡುವ ವಿಧಾನಗಳನ್ನು ಚಿತ್ರಪಟಗಳ ಮೂಲಕ ದೃಶ್ಯರೂಪದಲ್ಲಿ ವಿವರಿಸಿದರು. ಈ ಸಂದರ್ಭದಲ್ಲಿ ತಾಯಂದಿರಿಗೆ ಈ ಮೂಲಕ ಸ್ತನ್ಯಪಾನದ ಮಹತ್ವದ ಅರಿವು ಮೂಡಿಸಲಾಯಿತು. ಸಕ್ರಿಯವಾಗಿ ಪಾಲ್ಗೊಂಡ ತಾಯಂದಿರು ಕಾರ್ಯಕ್ರಮದಲ್ಲಿ ಹಲವು ಮಾಹಿತಿ ಪಡೆದರು.

# ದಾನಿಗೊಂಡ ಕಾಲೇಜಿನಲ್ಲಿ ಸ್ತನಪಾನ ಸಪ್ತಾಹ



**ತೇರದಾಳ :** ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ದಾನಿಗೊಂಡ ಕಾಲೇಜ್ ಆಫ್ ನರ್ಸಿಂಗ್ ವಿಭಾಗದಲ್ಲಿ ವಿಶ್ವ ಸ್ತನಪಾನ ಸಪ್ತಾಹ ಕಾರ್ಯಕ್ರಮ ಸಡಗರದಿಂದ ಜರುಗಿತು.

ಕಾರ್ಯಕ್ರಮ ನಿಮಿತ್ಯ ಪದ್ಮಾ ಆಸ್ಪತ್ರೆಯಲ್ಲಿ ನರ್ಸಿಂಗ್ ಕಾಲೇಜಿನ ಆರನೆಯ ಸೆಮಿಸ್ಟರ್ ವಿದ್ಯಾರ್ಥಿಗಳಿಂದ ಕಿರು ನಾಟಕ ಪ್ರದರ್ಶನ ಹಾಗೂ ಪೋಸ್ಟರ್ ಪ್ರೆಝೆಂಟೇಶನ್ ಜರುಗಿತು.

ಎಸ್.ಡಿ.ಎಂ. ಟ್ರಸ್ಟ್ ನಿರ್ದೇಶಕಿ ಡಾ. ಮಧುರಾ ದಾನಿಗೊಂಡ, ಸ್ತನಪಾನದ ಕುರಿತು ಹಲವು ವಿಷಯಗಳನ್ನು ಮಂಡಿಸಿದರು. ಪ್ರಸೂತಿ ವಿಭಾಗದ ಚನ್ನಮ್ಮ ಧರಿ ಸ್ತನಪಾನ ಕುರಿತು ವಿಶೇಷ ಉಪನ್ಯಾಸ ಹಾಗೂ ನರ್ಸಿಂಗ್ ಕಾಲೇಜ್ ವಿದ್ಯಾರ್ಥಿಗಳಿಗೆ ಕೆಲ ಮಹತ್ವದ ಸಂಗತಿಗಳನ್ನು ತಿಳಿಸಿದರು. ಪ್ರಾಚಾರ್ಯ ಡಾ. ಅನ್ನಪೂರ್ಣ ಎಸ್. ಡಾ. ನಂದಕುಮಾರ ಇನ್ನಿತರರು ಪಾಲ್ಗೊಂಡಿದ್ದರು.

# ಸ್ಪರ್ಧಾತ್ಮಕ ಯುಗದಲ್ಲಿ ಸಾಮಾನ್ಯ ಜ್ಞಾನ ಅತ್ಯವಶ್ಯ: ಶ್ವೇತಾ ಬೀಡಿಕರ

**ಜಮಖಂಡಿ :** ಸ್ಪರ್ಧಾತ್ಮಕ ಯುಗದಲ್ಲಿ ನಾವು ಯಶಸ್ವಿಯಾಗಲು ಸಾಮಾನ್ಯ ಜ್ಞಾನ ಬಹಳಷ್ಟು ಅತ್ಯವಷ್ಯವಾಗಿದೆ. ಭವಿಷ್ಯತ್ತಿನ ವಿದ್ಯಾರ್ಥಿಗಳನ್ನು ರೂಪಿಸುವ ಕೆಲಸ ಶಿಕ್ಷಕರ ಹೆಗಲ ಮೇಲಿದೆ. ಶಿಕ್ಷಕರು ಅತ್ಯಂತ ಶ್ರದ್ಧೆ ನಿಷ್ಠೆಯಿಂದ ತಮ್ಮ ವೃತ್ತಿಯಲ್ಲಿ ತೊಡಗಿಕೊಳ್ಳಬೇಕು ಎಂದು ಜಮಖಂಡಿಯ ಕಂದಾಯ ಉಪವಿಭಾಗಾಧಿಕಾರಿ ಶ್ವೇತಾ ಬೀಡಕರ ಹೇಳಿದರು.

ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ದರ್ಬಾರ ಭವನದಲ್ಲಿ ಬಿ.ಎಲ್.ಡಿ.ಇ. ಬಿಇಡಿ ಶಿಕ್ಷಣ ಮಹಾವಿದ್ಯಾಲಯ ಮತ್ತು ಹಳೆ ವಿದ್ಯಾರ್ಥಿ ಸಂಘದ ಸಹಯೋಗದಲ್ಲಿ ಎರಡು ದಿನಗಳ ಟಿಇಟಿ ಮತ್ತು ಸಿಇಟಿ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತಮ ಆರೋಗ್ಯಕರ ಸಮಾಜಕ್ಕಾಗಿ ಶಿಕ್ಷಕರ ಪಾತ್ರ ಬಹಳ ಪ್ರಮುಖವಾಗಿದೆ. ಶಿಕ್ಷಕ ವೃತ್ತಿಯಲ್ಲಿ ಹಲವಾರು ಹೊಸ ಹೊಸ



ಆವಿಷ್ಕಾರಗಳನ್ನು ಬಳಸಿಕೊಂಡು ಆದರ್ಶ ಶಿಕ್ಷಕರಾಗಬೇಕೆಂದರು.

ಹುಬ್ಬಳ್ಳಿಚಾಂಪಿಯನ್ಸ್‌ಕೋಚಿಂಗ್‌ಸಂಸ್ಥೆಯ ನಿರ್ದೇಶಕಸಂಪನ್ಮೂಲವ್ಯಕ್ತಿಡಾ.ಗುರುರಾಜ ಬುಲ್ಬುಲೆ ಮಾತನಾಡಿ, ಶಿಕ್ಷಕ ವೃತ್ತಿಯನ್ನ ಬಯಸುವ ಪ್ರತಿಯೊಬ್ಬರೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಕಾರ್ಯಾಗಾರಗಳಿಂದ ಶಿಕ್ಷಕರಾಗಲು ಬಹಳಷ್ಟು ಅನುಕೂಲವಾಗಲಿದೆ ಎಂದರು.

ಪ್ರಾಚಾರ್ಯ ಡಾ. ಪಿ. ಡಿ. ಪೋಳ ಮಾತನಾಡಿದರು. ಆಡಳಿತಾಧಿಕಾರಿ ಪ್ರೊ. ಎಸ್. ಎಚ್. ಲಗಳಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪ್ರಾಚಾರ್ಯ ಡಾ. ಶಿವಕುಮಾರ, ಡಾ. ವೀರಭದ್ರಪ್ಪ, ಪ್ರೊ. ನಿಖಿಲ ಮಂಟೂರ, ಪ್ರೊ. ಬಿ. ಐ. ಕರಲಟ್ಟಿ ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ನಗರದ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ದಾರೈನ್ ಶಿಕ್ಷಣ ಮಹಾವಿದ್ಯಾಲಯ ಸಹಿತ ವಿವಿಧ ಕಾಲೇಜಿನಿಂದ ಅಂದಾಜು 400 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಾಚಾರ್ಯಡಾ.ಡಿ.ಎಚ್.ಹುಸೇನಮಿಯಾ ಸ್ವಾಗತಿಸಿದರು. ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀಧರ ಕೋಳೂರ ಸೊಗಸಾಗಿ ನಿರೂಪಿಸಿ, ವಂದಿಸಿದರು.

# ಬಸವೇಶ್ವರ ಪದವಿ ಪೂರ್ವ ಕಾಲೇಜು ಹೈಸ್ಕೂಲ್ ವಿಭಾಗದ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ



**ಬಾಗಲಕೋಟೆ :** ನಗರದ ಪ್ರತಿಷ್ಠಿತ ಸಂಸ್ಥೆಯಾದ ಬಸವೇಶ್ವರ ವೀರಶೈವ ವಿದ್ಯಾ ವರ್ಧಕ ಸಂಘದ ಬಸವೇಶ್ವರ ಪದವಿ ಪೂರ್ವ ಕಾಲೇಜು ಹೈಸ್ಕೂಲ್ ವಿಭಾಗದ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಗುರುವಾರ ನೂತನ ಸಭಾಂಗಣದಲ್ಲಿ ಜರುಗಿತು,

ಮುಖ್ಯ ಅತಿಥಿಗಳಾಗಿ ಗುಳೇದಗುಡ್ಡದ ಜವಳಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ತಜ್ಞ ವೈದ್ಯರಾದ ಚಂದ್ರಕಾಂತ ಎಸ್ ಜವಳಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ವಿದ್ಯಾರ್ಥಿಗಳು ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡಾಗಮಾತ್ರವಿದ್ಯಾರ್ಥಿಗಳುಸರ್ವಾಂಗೀಣ ಅಭಿವೃದ್ಧಿ ಆಗಲು ಸಾಧ್ಯವೆಂದರು.

ಅಧ್ಯಕ್ಷತೆಯನ್ನು ವಹಿಸಿದ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ಹಾಗೂ ಶಾಲಾ ಆಡಳಿತ ಮಂಡಳಿಯ ಪದನಿಮಿತ್ತ ಕಾರ್ಯದರ್ಶಿಗಳಾದ ಕೆ.ಹೆಚ್.ಹೊಸೂರು ಅವರು ಮಾತನಾಡಿ ದೈಹಿಕ ಹಾಗೂ ಮಾನಸಿಕ ಸದೃಡತೆಗೆ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮುಖ್ಯ ಎಂದರು.

ಶಾಲೆಯ ಉಪ ಪ್ರಾಚಾರ್ಯರು ಸ್ವಾಗತಿಸಿದರು. ಶಿಕ್ಷಕಿ ಜಿ ಆರ್. ಕುಲಕರ್ಣಿ ಪರಿಚಯಿಸಿದರು.ಶಿಕ್ಷಕರಾದ ಆರ್. ಎಸ್ ಕ್ಯಾತನ್ನವರ್ ನಿರೂಪಿಸಿದರು. ಶ್ರೀಮತಿ. ಆರ್.ವಿ. ಮುದಿಯಪ್ಪನವರಮಠ ವಂದಿಸಿದರು.

# ವಿದ್ಯಾರ್ಥಿಗಳ ವ್ಯಕ್ತಿತ್ವದ ವಿಕಾಸವೇ ಸಂಸ್ಥೆಯ ಧ್ಯೇಯ

**ಬಾಗಲಕೋಟ :** ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಬಲ್ಲ ವಾತಾವರಣವನ್ನು ಕಲ್ಪಿಸಿ ಅವರ ವ್ಯಕ್ತಿತ್ವದ ವಿಕಾಸವನ್ನು ಸಾಧಿಸುವುದು ಸಂಸ್ಥೆಯ ಗುರಿಯಾಗಿದೆ ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು. ಸ್ಥಳೀಯ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ಬಿ.ಎ,ಬಿಕಾಂ ಹಾಗೂ ಬಿಸಿಎ ವಿದ್ಯಾರ್ಥಿಗಳಿಗೆ ಗುರುವಾರ ಆಯೋಜಿಸಿದ್ದ ಓರಿಯಂಟೇಶನ್ ಕಾರ್ಯಕ್ರಮ 'ಸ್ಪಂದನ'ದಲ್ಲಿ ಅವರು ಮಾತನಾಡಿದರು.

ಕಾಲೇಜಿಗೆ ಹೊಸದಾಗಿ ಸೇರ್ಪಡೆಯಾದ ಯುವಶಕ್ತಿಯ ಅಭಿವೃದ್ಧಿಯೇ ಸಂಸ್ಥೆಯ ಗುರಿಯಾಗಿದ್ದು ಆ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವು ಬೇಕು ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ನೈತಿಕತೆ ಬೆಳೆಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಪಠ್ಯದ ಜೊತೆಗೆ ಪಠ್ಯಪೂರಕ ಚಟುವಟಿಕೆಗಳನ್ನು ಆಯೋಜಿಸಲಾಗುವುದು. ಅವುಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಬೇಕು ಎಂದರು.



ಸುಮಾರು ಶೇಕಡಾ 28 ರಷ್ಟು ಯುವಕರು ಮಾತ್ರ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದು ಅಂತಹ ಅವಕಾಶವನ್ನು ಪಡೆದಿರುವ ವಿದ್ಯಾರ್ಥಿಗಳು ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಪಾಲಕರ ಕನಸನ್ನು ಸಾಕಾರಗೊಳಿಸಬೇಕು ಎಂದರು.

ಕಲಿಕೆ ನಿರಂತರವಾದದ್ದು.ಎಲ್ಲ ಮೂಲಗಳಿಂದ ವಿದ್ಯಾರ್ಥಿಗಳು ಜ್ಞಾನವನ್ನು ಸಂಪಾದಿಸಿ ಅದನ್ನು ಒಳ್ಳೆಯ ಉದ್ದೇಶಕ್ಕೆ ಬಳಸಿಕೊಳ್ಳಬೇಕು.

ಪೈಪೋಟಿಯನ್ನು ಸಮರ್ಥವಾಗಿ ಎದುರಿಸಲು ಸಂವಹನ ಮತ್ತು ಕಂಪ್ಯೂಟರ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಶ್ರದ್ಧೆ,ಪರಿಶ್ರಮ ಹಾಗೂ ಪ್ರಾಮಾಣಿಕ ಪ್ರಯತ್ನದಿಂದ ಮಾತ್ರ ಯಶ ಸಾಧ್ಯ ಎಂಬ ಅಂಶವನ್ನು ಅರಿತು ಮುನ್ನಡೆಯಬೇಕು.

ಮಹಾವಿದ್ಯಾಲಯದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಶಿಸ್ತನ್ನು ಅಳವಡಿಸಿಕೊಂಡು ಕಾಲೇಜಿನ ಹಿರಿಮೆ-ಗರಿಮೆಯನ್ನು ಹೆಚ್ಚಿಸುವ ಸಾಧನೆ ಮಾಡುವಂತೆ ಸಲಹೆ ನೀಡಿದರು.

ಆಯ್‌ಕ್ಯೂಎಸಿ ಸಂಯೋಜಕ ಡಾ.ಎಸ್. ಎಸ್.ಹಂಗರಗಿ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ವಿವರ ನೀಡಿದರೆ, ಗ್ರಂಥಾಲಯ ಸೌಲಭ್ಯ ಕುರಿತು ಡಿ.ಎಚ್.ಬಿರಾದಾರ, ಪ್ರವೇಶ ಹಾಗೂ ವಿವಿಧ ಸ್ಕಾಲರಶಿಪ್‌ಗಳ ಬಗ್ಗೆ ರಾಜು ಚವ್ಹಾಣ,ಎನ್‌ಎಸ್‌ಎಸ್ ಬಗ್ಗೆ ಎಸ್.ವಾಯ್.ಬೊಮ್ಮಣ್ಣವರ,ಎನ್‌ಸಿಸಿ ಬಗ್ಗೆ ಎಂ.ಡಿ.ಕೋರವಾರ ಮಾತನಾಡಿದರು. ಶ್ವೇತಾ ಕುಲಕರ್ಣಿ ಪ್ರಾರ್ಥಿಸಿದರು. ಎಸ್.ಎಂ.ಜೇವೂರ ನಿರೂಪಿಸಿದರು. ಬಿ.ಡಿ.ಮಾದರ ವಂದಿಸಿದರು.

# ಸರಕಾರಿ ಪ್ರಾಥಮಿಕ ಶಾಲೆಗೆ ಸ್ಮಾರ್ಟ್ ಟಿವಿ ಕಾಣಿಕೆ



**ಮಹಾಲಿಂಗಪುರ :** ಶಾಲೆ ನಮಗೇನು ಕೊಟ್ಟಿತು ಎನ್ನುವವರ ಮಧ್ಯೆ ಶಾಲೆಗೆ ನಾವೇನು ಕೊಟ್ಟಿದ್ದೇವೆ ಎಂದು ಕೇಳಿಕೊಳ್ಳುವ ಜನರೂ ಇದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿ ಇಲ್ಲೊಬ್ಬ ಸಮಾಜ ಸೇವಕಿ ಸರಕಾರಿ ಶಾಲೆಗೆ ಸ್ಮಾರ್ಟ್ ಟಿವಿ ಉಡುಗೊರೆಯಾಗಿ ನೀಡಿ ಸಾಮಾಜಿಕ ಕಳಕಳಿ ಮೆರೆದಿದ್ದಾರೆ.

ಸ್ಥಳೀಯ ಪರಿಸರ ಸ್ನೇಹಿ ಸಮಾಜ ಸೇವಕಿ ಡಾ. ಸಪ್ನಾ ಅನಿಗೋಳ ಸ್ವಂತ ಹಣದಲ್ಲಿ ಸಮೀಪದ ನಂದಗಾಂವ ವಸತಿ ಗುರವ್ ತೋಟದ ಸರಕಾರಿ ಪ್ರಾಥಮಿಕ ಶಾಲೆಯ ಮಕ್ಕಳ ಉತ್ತಮ ಕಲಿಕೆಗೆ ಸಹಾಯವಾಗಲಿ ಎಂಬ ಕಳಕಳಿಯಿಂದ ಉಚಿತ ಎಲ್‌ಇಡಿ ಸ್ಮಾರ್ಟ್ ಟಿವಿ ಕಾಣಿಕೆಯಾಗಿ ನೀಡಿದ್ದಾರೆ.

**ಪ್ರತಿಭೆ ಎಲ್ಲರಲ್ಲೂ ಇರುತ್ತದೆ. ಆದರೆ ಅವುಗಳಿಗೆ ಅರಳುವ ಅವಕಾಶವಿರುವುದಿಲ್ಲ. ಕುಗ್ರಾಮಗಳಲ್ಲಿ ಹೈಟೆಕ್ ಸೌಲಭ್ಯ ಮರೀಚಿಕೆಯಾಗುತ್ತಿದೆ. ಕೊರತೆಗಳ ನಡುವೆಯೂ ಸರಕಾರಿ ಶಾಲೆಗಳಲ್ಲಿ ಶಿಕ್ಷಣದ ವರತೆ ಹೆಚ್ಚಬೇಕಿದೆ. ಗ್ರಾಮೀಣ ಭಾಗದ ಬಡ ಪ್ರತಿಭಾವಂತ ಮಕ್ಕಳು ತಂತ್ರಜ್ಞಾನದ ಮೂಲಕ ಹೆಚ್ಚನದನ್ನು ಕಲಿಯಲಿ. ಸ್ಪರ್ಧಾತ್ಮಕ ಯುಗದಲ್ಲಿ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲಿ ಎಂಬ ಉದ್ದೇಶಕ್ಕೆ ಕೈಲಾದಷ್ಟು ಕಿರು ಕಾಣಿಕೆ ನೀಡಿದ್ದೇನೆ. ಅದರ ಪ್ರಯೋಜನ ಮಕ್ಕಳಿಗೆ ತಟ್ಟಿದರೆ ಸಾರ್ಥಕ.**

**। ಡಾ. ಸಪ್ನಾ ಅನಿಗೋಳ ಪರಿಸರ ಸ್ನೇಹಿ ಸಮಾಜ ಸೇವಕಿ.**

ಉಪಯುಕ್ತ ಉಡುಗೊರೆ ಕಂಡು ಶಿಕ್ಷಕರು ಮತ್ತು ಮಕ್ಕಳು ಖುಷಿಪಟ್ಟರು.

ಇಷ್ಟು ದಿನ ಶಾಲೆಯಲ್ಲೇ ಎಸ್ಡಿಎಂಸಿ ಮತ್ತು ಶಿಕ್ಷಕರ ಸಹಕಾರದಿಂದ ಪ್ರತಿ ಭಾನುವಾರ ಉಚಿತ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ನಡೆಯುತ್ತಿತ್ತು. ಇದೀಗ ಈ ಸ್ಮಾರ್ಟ್ ಟಿವಿಯಿಂದ ಮತ್ತಷ್ಟು ಕಲಿಕೆಗೆ ಉತ್ತೇಜನ ಸಿಗಲಿದೆ ಎಂದು ಹರ್ಷಿತರಾದರು.

ಮುಖ್ಯ ಶಿಕ್ಷಕ ವಿ.ವಿ. ಗೊಂದಿ, ಸಹಶಿಕ್ಷಕರಾದ ಎಸ್.ಜಿ. ಜುಟನಟ್ಟಿ, ಎಸ್.ಎಲ್. ಕಂಬಳಿ, ಎಸ್ಡಿಎಂಸಿ ಅಧ್ಯಕ್ಷ ಅಶೋಕ ಕಂಬಾರ, ಸದಸ್ಯರಾದ ಮಾದೇವ ಮುನ್ಯಾಳ, ಚಂದ್ರಪ್ಪ ಶಿವಕ್ಕಗೋಳ, ರಾಘವೇಂದ್ರ ಜಾಧವ, ನಾಗೇಶ ಗುರವ, ಬಾಲಚಂದ್ರ ಉಪ್ಪಾರ, ಲಕ್ಷ್ಮಣ ಜೋಗಿ, ಮಠಪತಿ ಮತ್ತಿತರರು ಉಪಸ್ಥಿತರಿದ್ದರು.

# 188 ನೇ 'ಮನೆಯಲ್ಲಿ ಮಹಾಮನೆ' ಕಾರ್ಯಕ್ರಮ



**ಮಹಾಲಿಂಗಪುರ :** ಸ್ಥಳೀಯ ನಿವಾಸಿ, ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ನಿವಾಸದಲ್ಲಿ ಜರುಗಿದ 'ಮನೆಯಲ್ಲಿ ಮಹಾಮನೆ' ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು.

ಪಟ್ಟಣದಲ್ಲಿ ಕಳೆದ ಹದಿನಾರು ವರ್ಷಗಳಿಂದ ನಡೆಯುತ್ತಿರುವ 188 ನೇ 'ಮನೆಯಲ್ಲಿ ಮಹಾಮನೆ' ಕಾರ್ಯಕ್ರಮ ಉಪನ್ಯಾಸ, ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಂದ ಜನಮನ ಸೂರೆಗೊಂಡಿತು. ತೇರದಾಳ ಮತಕ್ಷೇತ್ರದ ಜನಪ್ರತಿನಿಧಿಗಳು, ನಾಯಕರು ಮತ್ತು ತಹಶೀಲ್ದಾರ ಗಿರೀಶ ಸ್ವಾದಿ ಮತ್ತು ತಾಲೂಕು ಪಂಚಾಯತ್ ಇಓ ಸಿದ್ಧಪ್ಪ ಪಟ್ಟಿಹಾಳ, ಸ್ಥಳೀಯ ಠಾಣೆಯ ಪಿಎಸ್‌ಆಯ್ ಶ್ರೀಮತಿ ಮಧು ಎಲ್. ಮುಂತಾದ ಅಧಿಕಾರಿಗಳು ಭಾಗವಹಿಸಿದ್ದರು. ಝೀ ಕನ್ನಡ ವಾಹಿನಿಯ ಸರಿಗಮಪ ಕಲಾವಿದೆ ಅನನ್ಯಾ ಪಾಟೀಲ್ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಬನಹಟ್ಟಿಯ ವಚನ ಮಂಟಪದ ಮಹಾಂತ ದೇವರು, ಶಿಕ್ಷಕಿ ಅಕ್ಕಾತಾಯಿ ಕಿಚಡಿ, ಸಾಹಿತಿ ಸಿದ್ಧರಾಜ ಪೂಜಾರಿ, ಜಯರಾಮ ಶೆಟ್ಟಿ ಮತ್ತು ಸಿಆರ್‌ಪಿ ದಾಕ್ಷಾಯಿಣಿ ಮಂಡಿ, ಕವಿತಾ ಕೊಣ್ಣೂರ ಸೇರಿದಂತೆ ಅನೇಕರು ಮಾತನಾಡಿ ಅಲ್ಲಮಪ್ರಭು, ಬಸವಣ್ಣ ಮತ್ತು ಹನ್ನೆರಡನೇ ಶತಮಾನದ ವಚನಗಳ ವಿಶ್ಲೇಷಣೆ ವಿಶೇಷವೆನಿಸಿತು. ಅವರಾದಿಯ ಸರ್ಕಾರಿಪ್ರೌಢಶಾಲೆಯವಿದ್ಯಾರ್ಥಿನಿಯರುಅಣ್ಣಬಸವಣ್ಣನವರವಚನಕ್ಕೆ ಹೆಜ್ಜೆ ಹಾಕಿದರು. ಸಿದ್ದು ಕೊಣ್ಣೂರ, ಶ್ರೀಮತಿ ಕವಿತಾ ಕೊಣ್ಣೂರ, ಪುತ್ರ ಸಿದ್ದಾರ್ಥ, ಪುತ್ರಿ ಸಹನಾ ಸೇರಿ ಕುಟುಂಬ ಸಮೇತರಾಗಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಬಸವ ಬಳಗದ ಅಧ್ಯಕ್ಷ ಸಿ. ಎಂ. ಕಟಗಿ, ಚಂದ್ರು ಗೊಂದಿ, ಮುಖಂಡರಾದ ಡಾ. ಎಂ. ಆರ್. ಬೆಳಗಲಿ, ಶ್ರೀಶೈಲಪ್ಪ ಉಳ್ಳಾಗಡ್ಡಿ, ಸಂಗಪ್ಪ ಹಲ್ಲಿ, ಮಹಾದೇವ ಮಾರಾಪುರ, ಅಣ್ಣಾಜಿ ಫಡತಾರೆ ಸೇರಿದಂತೆ ನೂರಾರು ಬಸವಾಭಿಮಾನಿಗಳು ಭಾಗವಹಿಸಿದ್ದರು.

ಗಾಯಕಿ ಅನಘಾ ಪಾಟೀಲ ಪ್ರಾರ್ಥಿಸಿದರು. ಶಿಕ್ಷಕ ಬಸವರಾಜ ಮೇಟಿ ಸೊಗಸಾಗಿ ನಿರೂಪಿಸಿದರು. ಸಿ. ಎಂ. ಕಟಗಿ ವಂದಿಸಿದರು.

# ವ್ಯಕ್ತಿ ಕಾಣೆ: ಪತ್ತೆಗೆ ಸಹಕರಿಸಲು ಮನವಿ

**ಕೊಪ್ಪಳ :** ಕೊಪ್ಪಳ ಜಿಲ್ಲೆಯ ಕುಷ್ಟಗಿ ಪಟ್ಟಣದ ಕೃಷ್ಣಗಿರಿ ಕಾಲೋನಿಯ ನಿವಾಸಿ ಶಂಕ್ರಪ್ಪ ತಂದೆ ಬಸಪ್ಪ ಅಂಗಡಿ ಎಂಬ 38 ವರ್ಷದ ವ್ಯಕ್ತಿಯು 2025 ರ ಮಾರ್ಚ್ 1 ರಿಂದ ಕಾಣೆಯಾಗಿದ್ದು, ಈ ವರೆಗೂ ಪತ್ತೆಯಾಗಿರುವುದಿಲ್ಲ. ಈ ಬಗ್ಗೆ ಕುಷ್ಟಗಿ ಪೊಲೀಸ್ ಠಾಣಾ ಗುನ್ನೆ ನಂ: 116/2025 ಕಲಂ:00ಎಂ.ಪಿ. ಬಿ.ಎನ್.ಎಸ್-2023 ಮನುಷ್ಯ ಕಾಣೆ ನೇದ್ದರ ಅಡಿಯಲ್ಲಿ ಪ್ರಕರಣದ ದಾಖಲಾಗಿದೆ.

ಕಾಣೆಯಾದ ವ್ಯಕ್ತಿಯು 5.2 ಅಡಿ ಎತ್ತರವಿದ್ದು, ಸದೃಢ ಮೈಕಟ್ಟು, ಸಾದಗಪ್ಪು ಮೈಬಣ್ಣ ಹಾಗೂ ಕನ್ನಡ, ಹಿಂದಿ ಭಾಷೆ ಮಾತನಾಡುತ್ತಾರೆ. ಕಾಣೆಯಾದಾಗ ನೀಲಿ ಬಣ್ಣದ ಜೀನ್ಸ ಪ್ಯಾಂಟ್, ಕರಿ ಬಣ್ಣದ ಬಿಳಿ ಬಾರ್ಡರ ಇರುವ ಟಿಶರ್ಟ ಧರಿಸಿದ್ದನು.

ಈ ಚಹರೆಯ ವ್ಯಕ್ತಿಯ ಕುರಿತು ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಕೊಪ್ಪಳ ಎಸ್.ಪಿ ಕಛೇರಿ ದೂ.ಸಂ: 08539-230111, ಡಿ.ಎಸ್.ಪಿ ಗಂಗಾವತಿ ಮೊ.ಸಂ: 9480803721, ದೂ.ಸಂ: 08533-230853, ಕುಷ್ಟಗಿ ಸಿ.ಪಿ.ಐ ಮೊ.ಸಂ: 9480803732, ದೂ.ಸಂ: 08536-267033, ಪಿ.ಎಸ್.ಐ ಮೊ.ಸಂ: 9480803757 ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕುಷ್ಟಗಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಧಾನ ಪರಿಷತ್ ಸದಸ್ಯೆ ಡಾ. ಉಮಾಶ್ರೀಗೆ ಮನವಿ ಸಲ್ಲಿಕೆ



**ಮಹಾಲಿಂಗಪುರ :** ತಾಲ್ಲೂಕು ಕೇಂದ್ರವಾಗಲು ಎಲ್ಲಾ ರೀತಿಯಿಂದಲೂ ಯೋಗ್ಯವಾಗಿದೆ. ತಾಲೂಕಿಗಾಗಿ ಹೋರಾಟ ಆರಂಭವಾಗಿ ಮೂರು ವರ್ಷಗಳನ್ನು ಪೂರೈಸಿ ನಾಲ್ಕನೇ ವರ್ಷದಲ್ಲಿ ಮುನ್ನಡೆಯುತ್ತಿದೆ. ಬರುವ ಚಳಿಗಾಲ ಅಧಿವೇಶನದಲ್ಲಿ ಮಹಾಲಿಂಗಪುರ ತಾಲ್ಲೂಕು ಘೋಷಣೆಗೆ ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಬೇಕೆಂದು ತಾಲ್ಲೂಕು ಹೋರಾಟಗಾರರು ವಿಧಾನ ಪರಿಷತ್ ಸದಸ್ಯೆ ಡಾ. ಉಮಾಶ್ರೀ ಅವರಿಗೆ ಮನವಿ ಸಲ್ಲಿಸಿದರು.

ಹೋರಾಟ ಸಮಿತಿ ಅಧ್ಯಕ್ಷ ಸಂಗಪ್ಪ ಹಲ್ಲಿ, ಗಂಗಾಧರ ಮೇಟಿ, ವೀರೇಶ ಆಸಂಗಿ, ಶಿವಲಿಂಗ ಟಿರ್ಕಿ, ಲಕ್ಕಪ್ಪ ಚಮಕೇರಿ, ರಾಜೇಂದ್ರ ಮಿರ್ಜಿ, ಗೌಡಪ್ಪ ಚನ್ನಾಳ, ಶಂಭುಲಿಂಗ ಬಡಿಗೇರ, ಕರೆಪ್ಪ ಮೇಟಿ ಸೇರಿದಂತೆ ಇನ್ನೂ ಹಲವರು ಇದ್ದರು.

# ದೈಹಿಕ ಮತ್ತು ಮಾನಸಿಕ ಸದೃಢತೆಗೆ ಕ್ರೀಡೆ ಸಹಕಾರಿ: ಎಸ್.ಎಮ್. ಮುಲ್ಲಾ

**ಮಹಾಲಿಂಗಪುರ :** ದೈಹಿಕ ಮತ್ತು ಮಾನಸಿಕ ಸದೃಢತೆಗೆ ಕ್ರೀಡೆ ಸಹಕಾರಿಯಾಗಿದೆ. ಶಿಕ್ಷಣ ಮತ್ತು ಕ್ರೀಡೆ ಒಂದೇ ನಾಣ್ಯದ ಎರಡು ಮುಖಗಳು. ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರಲು ಸಾಧ್ಯ ಎಂದು ಮುಧೋಳ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಎಮ್. ಮುಲ್ಲಾ ಹೇಳಿದರು.

ಸಮೀಪದ ರನ್ನಬೆಳಗಲಿ ಪಟ್ಟಣದ ಬಂದಲಕ್ಷ್ಮೀ ದೇವಸ್ಥಾನದ ಕ್ರೀಡಾಂಗಣದಲ್ಲಿ ಗುರು ಮಹಾಲಿಂಗೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಆಶ್ರಯದಲ್ಲಿ ಜರುಗಿದ 2025-26 ನೇ ಸಾಲಿನ ರನ್ನಬೆಳಗಲಿ ಕ್ಲಸ್ಟರ್ ಮಟ್ಟದ ಪ್ರಾಥಮಿಕ ಶಾಲಾ ಕ್ರೀಡಾಕೂಟಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ಜೀವನಪರ್ಯಂತ ಮಾನಸಿಕವಾಗಿ, ದೈಹಿಕವಾಗಿ, ಸದೃಢವಾಗಿರಲು ಜ್ಞಾನದ ಜೊತೆಗೆ ಆರೋಗ್ಯವು ಬಹಳ ಮುಖ್ಯ ಪಾತ್ರ



ವಹಿಸುತ್ತದೆ. ಆದ್ದರಿಂದ ಮಕ್ಕಳಿಗೆ ಓದಿನ ಜೊತೆಗೆ ಕ್ರೀಡೆಯನ್ನು ಬೆಂಬಲಿಸಿ, ಸರಕಾರಿ ಮಟ್ಟದ ಕ್ರೀಡಾಕೂಟಗಳಿಗೆ ದಾನಿಗಳೇ ಶಕ್ತಿದಾತರು ಎಂದರು.

ಶಿಕ್ಷಣ ಸಂಘದ ಅಧ್ಯಕ್ಷರಾದ ಭೀಮನಗೌಡ ಶಿವನಗೌಡಪಾಟೀಲಕ್ರೀಡಾಧ್ವಜಾರೋಹಣ ನೆರವೇರಿಸಿದರು. ದೈಹಿಕ ಶಿಕ್ಷಕ ಎಸ್. ಬಿ. ರಡರಟ್ಟಿ ಕ್ರೀಡಾಪಟುಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಸಾನಿಧ್ಯ ವಹಿಸಿದ್ದ ಕಾಡಯ್ಯ ಗಣಾಚಾರಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಆಡಳಿತ ಮಂಡಳಿಯವರಾದ ಲಕ್ಕಪ್ಪ ದೊಡಹಟ್ಟಿ, ಮಲ್ಲಪ್ಪ ಸನಹಟ್ಟಿ, ಮುತ್ತಪ್ಪ ಹೊಸಪೇಟಿ, ಗುರುನಾಥ ಹಿಪ್ಪರಗಿ, ಶಿವಪ್ಪ ಕೊಣ್ಣೂರ, ಪರಮಾನಂದ ಆಲಗೂರ, ಹನಮಂತ ಕಡಪಟ್ಟಿ, ಈರಪ್ಪ ಹಿಪ್ಪರಗಿ, ಚಿಕ್ಕಪ್ಪ ನಾಯಕ, ಪಂಡಿತ ಪೂಜಾರ, ರವೀಂದ್ರ ಮಂಟೂರ, ಬಸವಂತ ಮುರನಾಳ, ಮಾರುತಿ ಆರೇನಾಡ, ಗಜಾನನ ಸಿದ್ದಾಪೂರ, ಬಸಪ್ಪ ಮಂಟೂರ, ಪ್ರವೀಣ ಬರಮನಿ, ಮಹಾಲಿಂಗಪ್ಪ ಹಂಪಿಹೊಳಿ ಮತ್ತು ದುಂಡಪ್ಪ ಬರಮನಿ, ಸದಾಶಿವ ಹೊಸಟ್ಟಿ ಅತಿಥಿಗಳಾಗಿ ಭಾಗವಹಿಸಿದ್ದರು.

ಸಿಆರ್‌ಪಿಗಳಾದ ಬಸವರಾಜ ಬಳ್ಳಾರಿ ನಿರ್ಣಾಯಕರಿಗೆ ಆಟದ ನಿಯಮಗಳ ಬಗ್ಗೆ ತಿಳಿಸಿ, ಮಾರ್ಗದರ್ಶನ ನೀಡಿದರು.

ಮುಖ್ಯೋಪಾಧ್ಯಾಯರಾದ ಅಶೋಕ ಮೂಡಲಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಕರಾದ ಬಸವರಾಜ ಬೂದಿಹಾಳ ಸ್ವಾಗತಿಸಿದರು. ವಸಂತ ಚವ್ಹಾಣ ನಿರೂಪಿಸಿದರು.ಯೋಗಶಿಕ್ಷಕರಾಘವೇಂದ್ರ ನೀಲಣ್ಣವರ ವಂದಿಸಿದರು.

# ರಸಪ್ರಶ್ನೆ ಕಾರ್ಯಕ್ರಮ: ಸಜ್ಜನ ಪ್ರೌಢಶಾಲೆ ಪ್ರಥಮ



**ಇಳಕಲ್ :** ಇಲ್ಲಿನ ಶ್ರೀಮಠದಲ್ಲಿ ಶರಣ ಸಂಸ್ಕೃತಿ ಮಹೋತ್ಸವ ಅಂಗವಾಗಿ ಅಕ್ಕನಬಳಗದ ವತಿಯಿಂದ ನಡೆದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಸಜ್ಜನ ವಿದ್ಯಾವರ್ಧಕ ಸಂಘದ ಸಜ್ಜನ ಪ್ರೌಢಶಾಲೆ ಪ್ರಥಮ ಸ್ಥಾನ ಗಳಿಸಿದೆ.

ದ್ವಿತೀಯ ಸ್ಥಾನವನ್ನು ಜೇಸಿ ಪ್ರೌಢಶಾಲೆ ಪಡೆದುಕೊಂಡಿದೆತೃತೀಯಸ್ಥಾನಮೂರುಶಾಲೆಗಳಲ್ಲಿ ಹಂಚಿ ಹೋಗಿದೆ ಸಿಎಸ್ ವಿಎಂ ಪ್ರೌಢಶಾಲೆ, ಎಸ್ ಆರ್ ಕಂಠಿ ಬಾಲಕಿಯರ ಪ್ರೌಢಶಾಲೆ ಮತ್ತು ಬಸವಾ ಪಬ್ಲಿಕ್ ಶಾಲೆಗಳು ಪಡೆದುಕೊಂಡಿವೆ ಸಮಾಧಾನಕರ ಬಹುಮಾನವನ್ನು ಸರಕಾರಿ ಜೂನಿಯರ್ ಕಾಲೇಜ್ ಪಡೆದುಕೊಂಡಿದೆ ಎಂದು ಅಕ್ಕನಬಳಗದ ಸುನೀತಾ ಅಂಗಡಿ ತಿಳಿಸಿದ್ದಾರೆ.

**ವರದಿ ನಬಿ ಹುಣಚಗಿ**

# ಯಲಬುರ್ಗಾ ತಾಲ್ಲೂಕಿನಲ್ಲಿ ಮಳೆ, ಕುಷ್ಟಗಿ ತಾಲ್ಲೂಕಲ್ಲಿ ಪ್ರವಾಹ



**ಕುಷ್ಟಗಿ** : ತಾಲ್ಲೂಕಿನಲ್ಲಿ ಬುಧವಾರ ಮಳೆ ಪ್ರಮಾಣ ತೀರಾ ಕಡಿಮೆಯಾದರೂ ಹಳ್ಳಗಳು ಮಾತ್ರ ನದಿ ರೂಪದಲ್ಲಿ ಹರಿಯುತ್ತಿದ್ದುದು ಗುರುವಾರ ಕಂಡುಬಂತು.

ಉತ್ತರ ಭಾಗದಲ್ಲಿರುವ ಯಲಬುರ್ಗಾ ತಾಲ್ಲೂಕಿನ ಬಹುತೇಕ ಹಳ್ಳಿಗಳಲ್ಲಿ ಮೂರ್ನಾಲ್ಕು ತಾಸಿನವರೆಗೂ ಅತ್ಯಧಿಕ ಮಳೆ ಸುರಿದ ಪರಿಣಾಮ ಕುಷ್ಟಗಿ ತಾಲ್ಲೂಕಿನ ಹಳ್ಳಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು.

ಶಾಖಾಪುರ, ಯಲುಬುರ್ತಿ, ಬಂಡಿ, ಬನ್ನಿಗೋಳ ಭಾಗದಿಂದ ಬರುವ ಹಳ್ಳಗಳ ಹೆಚ್ಚಿನ ಪ್ರಮಾಣದ ನೀರು ನಿಡಶೇಸಿ ಕೆರೆಗೆ ಬಂದಿತು. ಸಾರ್ವಜನಿಕರು, ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಕೆಲ ವರ್ಷಗಳ ಹಿಂದೆ ನಿಡಶೇಸಿ ಕೆರೆ ಪುನಶ್ಚೇತನಗೊಂಡಿತ್ತು. ಹಲವು ವರ್ಷಗಳ ನಂತರ ಈ ಬಾರಿ ಮಾತ್ರ ಕೋಡಿ ಮೂಲಕ ನೀರು ಧುಮ್ಮಿಕ್ಕುತ್ತಿರುವುದನ್ನು ನೋಡಲು ಪಟ್ಟಣ ಹಾಗೂ ಸುತ್ತಲಿನ ಜನರು ತಂಡೋಪತಂಡವಾಗಿ ಬಂದಿದ್ದರು.

ಹಳ್ಳದ ಪ್ರವಾಹದಿಂದ ಹನುಮಸಾಗರ, ಬಿಜಕಲ್ ರಾಜ್ಯ ಹೆದ್ದಾರಿಗಳು ಜಲಾವೃತಗೊಂಡು ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಮುದೇನೂರು ಹಳ್ಳವೂ ನದಿಯಂತೆ ಗೋಚರಿಸಿತು. ಯರ್ಗವಣಕಿ ಸಮೀಪದವರೆಗೂ ನೀರು ಬಂದು ರಸ್ತೆ ಸಂಪರ್ಕ ಕಡಿತಗೊಂಡಿತ್ತು. ವಾಹನಗಳು ಸಂಚರಿಸಲು ಸಾಧ್ಯವಾಗಲಿಲ್ಲ. ಹಳ್ಳಕ್ಕೆ ಸೇತುವೆಯ ಅಗತ್ಯ ಇರುವುದನ್ನು ಗ್ರಾಮಸ್ಥರು ಪುನರುಚ್ಚರಿಸಿದರು.

ಬೆಳೆಹಾನಿ: ಕುಷ್ಟಗಿ ತಾಲ್ಲೂಕಿನ ಟಕ್ಕಳಕಿ, ಬಿಜಕಲ್, ವಣಗೇರಿ ಸೀಮಾಂತರದಲ್ಲಿ ಹಳ್ಳದ ನೀರು ಪ್ರವಾಹ ರೂಪದಲ್ಲಿ ಹರಿದು ದಾಳಿಂಬೆ, ಮಕ್ಕೆಜೋಳ, ತೊಗರಿ, ಸಜ್ಜೆ, ತರಕಾರಿ ಮೊದಲಾದ ಬೆಳೆಗಳ ಹೊಲ ಗದ್ದೆಗಳು, ತೋಟಗಳು ಜಲಾವೃತಗೊಂಡಿದ್ದವು.

ಸಾಕಷ್ಟು ಸಂಖ್ಯೆಯಲ್ಲಿ ರೈತರು ಹತ್ತಿ ಬೀಜೋತ್ಪಾದನೆಯಲ್ಲಿ ತೊಡಗಿದ್ದು ಬಹಳಷ್ಟು ತಾಕುಗಳಲ್ಲಿ ನೀರು ಭರ್ತಿಯಾಗಿ ಬೆಳೆಗಳು ಹಾಣಿಗೊಳಾಗಿದ್ದು ಕಂಡುಬಂದಿತು.

ವಣಗೇರಿ ಸೀಮಾಂತರದಲ್ಲಿನ ಹಳ್ಳಕ್ಕೆ ಅವೈಜ್ಞಾನಿಕ ರೀತಿಯಲ್ಲಿ ನಿರ್ಮಿಸಿದ ಸರಣಿ ಚೆಕ್‌ಡ್ಯಾಂ ಮೂಲಕ ನೀರು ಹರಿಯಲು ಸಾಧ್ಯವಾಗದೆ ಹೊಲಗಳಿಗೆ ನುಗ್ಗಿ ಮೇಲ್ಮಣ್ಣು ಸಹ ಕೊಚ್ಚಿ ಅವಾಂತರ ಸೃಷ್ಟಿಸಿದೆ ಎಂದು ರೈತ ಶಿವನಗೌಡ ಟಕ್ಕಳಕಿ, ಬಸವರಾಜ ಇತರರು ಹೇಳಿದರು.

ವಣಗೇರಿ ಸೀಮಾಂತರದಲ್ಲಿ ಪಾಂಡುರಂಗ ಚವ್ಹಾಣ ಎಂಬುವವರ ತೋಟದಲ್ಲಿ ಪ್ರವಾಹದ ನೀರಿನಲ್ಲಿ ಸಿಲುಕಿದ್ದ ಎಂಟು ಹಸುಗಳನ್ನು ಕುಷ್ಟಗಿಯ ಅಗ್ನಿಶಾಮಕ ಠಾಣೆ ಸಿಬ್ಬಂದಿ ರಕ್ಷಿಸಿದರು.

ನಂತರ ಸ್ಥಳಕ್ಕೆ ಭೇಟಿ ನೀಡಿದ್ದ ಶಾಸಕ ದೊಡ್ಡನಗೌಡ ಪಾಟೀಲ ಹಾನಿಗೊಳಗಾದ ಹೊಲಗಳನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ರೈತರು ತಮ್ಮ ಸಮಸ್ಯೆಯನ್ನು ಶಾಸಕರಿಗೆ ವಿವರಿಸಿದರು.

ನೀರು ಕಡಿಮೆಯಾದ ನಂತರ ಮತ್ತೊಮ್ಮೆ ಭೇಟಿ ನೀಡಿ ಪರಿಶೀಲಿಸಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಹಾನಿ ಸಮೀಕ್ಷೆಗೆ ಸೂಚಿಸುವುದಾಗಿ ಶಾಸಕ ರೈತರಿಗೆ ಹೇಳಿದರು.

ತಹಶೀಲ್ದಾರ್ ಅಶೋಕ ಶಿಗ್ಗಾಂವಿ, ತಾಪಂ ಇಒ ಪಂಪಾಪತಿ ಹಿರೇಮಠ ಇತರರು ಇದ್ದರು.

# ಪತ್ರಕರ್ತರ ಮೇಲೆ ಹಲ್ಲೆಗೆ ಖಂಡನೆ: ಪ್ರತಿಭಟನೆ



**ಕೊಪ್ಪಳ** : ಉಜಿರೆಯಲ್ಲಿ ನಡೆದ ವರದಿಗಾರ ಹರೀಶ್ ಹಾಗೂ ಕ್ಯಾಮರಾಮ್ಯಾನ್ ನವೀನ್ ಪೂಜಾರಿ ಮೇಲಿನ ಹಲ್ಲೆ ಖಂಡಿಸಿ ಕೊಪ್ಪಳ ಮೀಡಿಯಾ ಕ್ಲಬ್ ವತಿಯಿಂದ ಪತ್ರಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಉಜರೆಯ ಬೆನಕ ಆಸ್ಪತ್ರೆಗೆ ವರದಿ ಮಾಡಲು ತೆರಳಿದ್ದ ವೇಳೆ ಈ ಹಲ್ಲೆ ನಡೆದಿದ್ದು, ಎಫ್‌ಐಆರ್ ದಾಖಲಾಗಿದೆ.

ಕರ್ತವ್ಯನಿರತಪತ್ರಕರ್ತರಮೇಲೆಹಲ್ಲೆಮಾಡಿರುವುದು ಖಂಡನೀಯ. ಸಾಮಾಜಿಕ ವ್ಯವಸ್ಥೆಯಲ್ಲಿ ಜನರ ಧ್ವನಿಯಾಗಿ ಮಾಧ್ಯಮಗಳು ಸದಾಕಾಲ ಕೆಲಸ ಮಾಡುತ್ತಿವೆ. ಅಂತಹ ಕರ್ತವ್ಯದ ವೇಳೆ ಹಲ್ಲೆ, ದೌರ್ಜನ್ಯ, ಬೆದರಿಕೆ ತರವಲ್ಲ' ಎಂದು ಕಪ್ಪು ರಿಬ್ಬನ್ ಧರಿಸಿ ಪ್ರತಿಭಟಿಸಿ ಪತ್ರಕರ್ತರು ಹೇಳಿದರು.

ರಾಜ್ಯಾದ್ಯಂತ ವೃತ್ತಿ ನಿರತ ಪತ್ರಕರ್ತರ ಮೇಲೆ ಇತ್ತೀಚೆಗಿನ ವರ್ಷಗಳಲ್ಲಿ ಹಲ್ಲೆ, ಬೆದರಿಕೆ ಹಾಕುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಸರ್ಕಾರ ಪತ್ರಕರ್ತರ ಹಿತ ರಕ್ಷಣೆಗಾಗಿ ವಿಶೇಷ ಕಾನೂನು ಜಾರಿ ಮಾಡಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿಗೆ ಬರೆದ ಪತ್ರವನ್ನು ಗ್ರೇಡ್2 ತಹಶೀಲ್ದಾರ್ ಗವಿಸಿದ್ದಪ್ಪ ಮಣ್ಣೂರ್ ಅವರಿಗೆ ಸಲ್ಲಿಸಲಾಯಿತು.

ಕ್ಲಬ್ ಅಧ್ಯಕ್ಷ ರವೀಂದ್ರ ವಿ.ಕೆ., ಕಾರ್ಯದರ್ಶಿ ದತ್ತು ಕಮ್ಮಾರ, ಖಜಾಂಚಿ ಅನಿಲ್ ಬಾಚನಹಳ್ಳಿ ಸೇರಿದಂತೆ ಅನೇಕರು ಇದ್ದರು.

# ಜಾಮೀನಿಗೆ ನೆರವಾಗಲ್ಲ; ಮುಖಂಡರ ಭರವಸೆ



**ಕೊಪ್ಪಳ** : 'ನಾವೆಲ್ಲರೂ ಭಾವೈಕ್ಯದಿಂದ ಇದ್ದೇವೆ. ಈ ಬಾಂಧವ್ಯಕ್ಕೆ ಕೊಳ್ಳಿ ಇಟ್ಟು ಗವಿಸಿದ್ದಪ್ಪ ನಾಯಕನ ಕೊಲೆಗೆ ಕಾರಣರಾದ ಮುಸ್ಲಿಂ ಕುಟುಂಬಗಳಿಗೆ ಸಮುದಾಯದ ವತಿಯಿಂದ ಜಾಮೀನು ಸೇರಿದಂತೆ ಯಾವುದೇ ವಿಚಾರಕ್ಕೂ ನೆರವು ನೀಡುವುದಿಲ್ಲ.

ಕೊಲೆಯಾದ ಯುವಕನಿಗೆ ನ್ಯಾಯ ಸಿಗುವ ತನಕ ನಿಮ್ಮೊಂದಿಗೆ ಹೋರಾಡುತ್ತೇವೆ'

ಇದು ಕೊಪ್ಪಳದ ಮುಸ್ಲಿಂ ಸಮಾಜದ ಪ್ರಮುಖರು ಗವಿಸಿದ್ದಪ್ಪ ನಾಯಕ ಅವರ ಕುಟುಂಬದವರಿಗೆ ನೀಡಿದ ಭರವಸೆ.

ಹಲವು ಮುಖಂಡರು ಗುರುವಾರ ಅವರ ಮನೆಗೆ ಭೇಟಿನೀಡಿ ಸಾಂತ್ವನ ಹೇಳಿದರು.

ಈ ವೇಳೆ ಗವಿಸಿದ್ದಪ್ಪ ಕುಟುಂಬದವರ ದುಃಖದ ಕಟ್ಟೆಯೊಡೆದು ಆಕ್ರೋಶವಾಗಿ ಹೊರಹೊಮ್ಮಿತು.

ಆಗ ಪ್ರತಿಕ್ರಿಯಿಸಿದ ನಗರಸಭೆ ಅಧ್ಯಕ್ಷರೂ ಆದ ಮುಸ್ಲಿಂ ಸಮಾಜದ ಮುಖಂಡ ಅಮ್ಜದ್ ಪಟೇಲ್, 'ನಾವೆಲ್ಲರೂ ಒಂದೇ ಓಣಿಯಲ್ಲಿ ಇದ್ದವರು. ಘಟನೆ ನಡೆದ ದಿನದಿಂದಲೂ ಗವಿಸಿದ್ದಪ್ಪನ ಕುಟುಂಬದವರ ಜತೆ ಇದ್ದೇವೆ.

ನಮ್ಮ ಸಮಾಜದಲ್ಲಿ ಸಭೆ ಮಾಡಿದ್ದು ದುಷ್ಕೃತ್ಯ ಎಸಗಿದವರಿಗೆ ಯಾವುದೇ ಸಹಕಾರ ನೀಡುವುದಿಲ್ಲ.

ಘಟನೆ ಬಳಿಕವೂ ಸಾಮಾಜಿಕ ತಾಣದಲ್ಲಿಸಮಾಜದಸ್ವಾಸ್ಥಹಾಳು ಮಾಡುವ ರೀತಿಯಲ್ಲಿ ಹೇಳಿಕೆ ನೀಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ನಾವೇ ದೂರು ನೀಡುತ್ತೇವೆ' ಎಂದು ತಿಳಿಸಿದರು.

ಆಗ ಗವಿಸಿದ್ದಪ್ಪ ನಾಯಕ ಅವರ ಕುಟುಂಬದವರು,'ಆರೋಪಿಗಳು ಮತ್ತು ಕೊಲೆಗೆ ಪ್ರಚೋದನೆ ನೀಡಿದ ಕುಟುಂಬಗಳಿಗೆ ಯಾವುದೇ ನೆರವು ನೀಡುವುದಿಲ್ಲ ಎಂದು ಫತ್ವಾ ಹೊರಡಿಸಬೇಕು' ಎಂದು ಒತ್ತಾಯಿಸಿದರು.

ಕೊಲೆಯಾದ ಬಳಿಕ ಮುಸ್ಲಿಮರು ನಮಾಜ್ ಮಾಡಿ ಸಂಭ್ರಮಿಸಿದ್ದಾರೆ; ನಮ್ಮ ಮಗ ಸತ್ತಾಗ ನಿಮಗೆ ಸಂಭ್ರಮವೇ ಎಂದು ಅವರ ಸಹೋದರಿ ಅನ್ನಪೂರ್ಣಆಕ್ರೋಶಭರಿತರಾಗಿ ಪ್ರಶ್ನೆ ಮಾಡಿದರು. 'ನಾವು ಯಾವುದೇ ಸಂಭ್ರಮ ಮಾಡಿಲ್ಲ. ಮನುಷ್ಯತ್ವ ಇರುವ ಯಾರೂ ಆ ರೀತಿ ಮಾಡುವುದಿಲ್ಲ' ಎಂದು ಕಾಟನ್ ಪಾಷಾ ಹಾಗೂ ಇತರರು ಸಮಾಧಾನ ಪಡಿಸಿದರು.

ಕರ್ನಾಟಕ ಮುಸ್ಲಿಂ ಯುನಿಟಿ ಜಿಲ್ಲಾಧ್ಯಕ್ಷ ಮಹಮ್ಮದ್ ಜಿಲಾನ್ ಕಿಲ್ಲೇದಾರ್, ಅಂಜುಮನ್ ಕಮಿಟಿ ಅಧ್ಯಕ್ಷ ಎಂ.ಡಿ ಆಸೀಫ್ ಕರ್ಕಿಹಳ್ಳಿ, ರಾಬ್ತೆ ಮಿಲ್ಲತ್ ಸಂಘಟನೆ ಪ್ರಮುಖ ಲಾಯಖ್ ಅಲಿ, ಸಮಾಜದ ಮುಖಂಡರಾದ ಅಜೀಮ್‌ಅತ್ತಾರ್,ಮಾನ್ವಿಪಾಷಾ, ಮೌಲಾಹುಸೇನ್ ಜಮೇದಾರ, ಹುಸೇನ್ ಪೀರಾ ಮುಜಾವರ, ಮುಸ್ತಫಾ ಕುದರಿಮೋತಿ, ಸಾಧಿಕ್ ಅತ್ತಾರ್, ಆರ್.ಎಂ. ರಫಿ, ಗಫಾರ್ ದಿಡ್ಡಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಕೊಪ್ಪಳ :** ಕೃಷಿ ಇಲಾಖೆಯಿಂದ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಸಹಾಯಧನಕ್ಕಾಗಿ ಆಸಕ್ತ ರೈತರು, ಸಂಘ ಸಂಸ್ಥೆಗಳು ಹಾಗೂ ರೈತ ಉತ್ಪಾದಕ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ರೈತರಿಗೆ ವಿತರಿಸುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಗೆ ಸಾಮಾನ್ಯ ವರ್ಗ ಘಟಕದಡಿ ವೈಯಕ್ತಿಕ ಫಲಾನುಭವಿಗೆ 2 ಮತ್ತು ಸಂಘ ಸಂಸ್ಥೆಗಳಿಗೆ 1 ಸೇರಿ ಒಟ್ಟು 3 ಕಂಬೈನ್ಡ್ ಹಾರ್ವೆಸ್ಟರ್ ಹಬ್ (Combined Harvestor hub) ಕ್ರೀಯಾ ಯೋಜನೆ ಅನುಮೋದನೆಗೊಂಡಿರುತ್ತದೆ. ಈ ಹಬ್‌ನಲ್ಲಿ ಕಡ್ಡಾಯವಾಗಿ ಕಡ್ಡಾಯವಾಗಿ ಬೈಂಡ್ ಹಾರ್ವೆಸ್ಟರ್ ಮತ್ತು ಟ್ರ್ಯಾಕ್ಟರ್ ಆಪರೇಟೆಡ್ ಬೇಲರ್ಸ್ (Tractor operated Balers) ಇರಬೇಕು. ಈ ಯೋಜನೆಯಡಿ ಸಾಮಾನ್ಯ ವರ್ಗ ಘಟಕದಡಿ ವೈಯಕ್ತಿಕ ಫಲಾನುಭವಿಗೆ ಗರಿಷ್ಠ 40 ಲಕ್ಷ (50%ರ ಸಹಾಯಧನ) ಮತ್ತು ಸಂಘ ಸಂಸ್ಥೆಗಳಿಗೆ ಗರಿಷ್ಠ 50 ಲಕ್ಷ (70% ಸಹಾಯಧನ )ಇರುತ್ತದೆ.

ಆದ ಕಾರಣ ಆಸಕ್ತ ರೈತರು, ಸಂಘ ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಐ), ಕೃಷಿ ಯಂತ್ರೋಪಕರಣಗಳ ಬ್ಯಾಂಕ್ (ಎಫ್.ಎಂ.ಬಿ) ಅಥವಾ ಕೃಷಿ ಯಂತ್ರಧಾರೆ ಕೇಂದ್ರಗಳು (ಸಿ.ಹೆಚ್.ಎಸ್.ಸಿ)ಗಳು ಅರ್ಜಿಯನ್ನು ನಿಗಧಿತ ನಮೊನೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಆಗಸ್ಟ್ 20 ರೊಳಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಅರ್ಜಿ ಸಲ್ಲಿಸಬೇಕು.

ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಉಪಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಲಾಗುವುದು. ನಂತರ ಈ ಕಛೇರಿಯಲ್ಲಿ ಉಪಕೃಷಿ ನಿರ್ದೇಶಕರ ಕಛೇರಿಯಿಂದ ಸ್ವಿಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾ ಮಟ್ಟದ ಉಪಕರಣ ಸಮಿತಿಯಲ್ಲಿ ಮಂಡಿಸಲಾಗುವುದು. ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಒಂದೇ ಹಬ್‌ಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿ ಅರ್ಹಗೊಂಡಲ್ಲಿ, ಲಾಟರಿ ಮುಖಾಂತರ ಫಲಾನುಭವಿಯನ್ನು ಆಯ್ಕೆ ಮಾಡುವುದು. ಈ ಕಛೇರಿಯಿಂದ ಆಯ್ಕೆಯಾದ ಫಲಾನುಭವಿಗೆ ಕೃಷಿ ಯಂತ್ರೋಪಕರಣಗಳನ್ನು ದಾಸ್ತಾನಿಕರಿಸಲು ಕಾರ್ಯಾದೇಶ ನೀಡಲಾಗುವುದು. ಹಬ್‌ವಾರು ಸ್ವೀಕೃತವಾದ ಯಂತ್ರೋಪಕರಣಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ ಮತ್ತು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸಿ, ಸಹಾಯಧನವನ್ನು ನಿಯಾಮನುಸಾರ ಸಂಬಂಧಿಸಿದವರ ಸಾಲದ ಬ್ಯಾಂಕ್ ಖಾತೆಗೆ ಕ್ರೆಡಿಟ್ ಲಿಂಕ್ಡ್ ಬ್ಯಾಕ್ ಎಂಡೆಡ್ ಸಬ್ಸಿಡಿ (Credit Linked Back ended Subsidy) ಮೂಲಕ ಜಮಾ ಮಾಡಲಾಗುವುದು.

# ಡೋಣಿ ನದಿಗೆ ಪ್ರವಾಹ; ಸ್ಥಳಕ್ಕೆ ತಹಶೀಲ್ದಾರ್ ಭೇಟಿ



**ದೇವರಹಿಪ್ಪರಗಿ** : ಡೋಣಿ ನದಿ ಪ್ರವಾಹದಿಂದ ತಾಲ್ಲೂಕಿನಲ್ಲಿ ಹಲವು ಗ್ರಾಮಗಳ ರಸ್ತೆ ಸಂಚಾರ ಸಂಪೂರ್ಣ ಸ್ಥಗಿತವಾಗಿದ್ದು ಹಾಗೂ ರೈತರ ಜಮೀನುಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ.

ತಾಲ್ಲೂಕಿನ ಸಾತಿಹಾಳ ಹಾಗೂ ಯಾಳವಾರ ಗ್ರಾಮಗಳ ಹತ್ತಿರ ಇರುವ ದೋಣಿ ನದಿ ಸೇತುವೆ ಮೇಲೆ ನೀರು ಹರಿಯುತ್ತಿದ್ದು ಇದರಿಂದ ವಾಹನಗಳ ಸಂಚಾರ ಹಾಗೂ ಇತರ ಭಾಗಗಳ ಸಂಪರ್ಕ ಕಡಿತವಾಗಿದ್ದು, ಸುಮಾರು 50ಕ್ಕೂ ಅಧಿಕ ಕಿಲೋಮೀಟರ್ ಸುತ್ತು ಹಾಕೋ ಅನಿವಾರ್ಯತೆ ಎದುರಾಗಿದೆ.ಡೋಣಿ ತೀರದ ರೈತರ ಜಮೀನುಗಳಿಗೆ ಪ್ರವಾಹದ ನೀರು ನುಗ್ಗಿದ್ದು, ಹಲವು ಪ್ರದೇಶದಲ್ಲಿನ ಬೆಳೆಗಳು ಜಲಾವೃತವಾಗಿವೆ.

ಸಾವಿರಾರು ರೂಪಾಯಿ ಖರ್ಚು ಮಾಡಿ ಬೆಳೆದ ಬೆಳೆಗಳನ್ನುಕಳೆದುಕೊಂಡುರೈತರುಕಂಗಾಲಾಗಿದ್ದಾರೆ. ತಾಲ್ಲೂಕಿನ ಯಾಳವಾರ, ಸಾತಿಹಾಳ, ಬೈರವಾಡಗಿ, ಕೊಂಡಗೂಳಿ ಸೇರಿದಂತೆ ಇತರೆ ಗ್ರಾಮಗಳಲ್ಲಿ ಬೆಳೆ ಹಾನಿಯಾಗಿದ್ದು, ಪರಿಹಾರದ ಭರವಸೆ ನೀಡದೇ ಸೂಕ್ತ ಪರಿಹಾರ ನೀಡಲು ಅನ್ನದಾತರು ಒತ್ತಾಯಿಸುತ್ತಿದ್ದಾರೆ.

ಡೋಣಿ ಸೇತುವೆಗೆ ತಹಶೀಲ್ದಾರ್ ಭೇಟಿ ಪರೀಶೀಲನೆ. ತಾಲ್ಲೂಕಿನ ಸಾತಿಹಾಳ ಹಾಗೂ ಯಾಳವಾರ ಗ್ರಾಮಗಳ ಹತ್ತಿರ ಇರುವ ದೋಣಿ ನದಿ ಸೇತುವೆಗೆ ಗುರುವಾರದಂದು ತಹಶೀಲ್ದಾರ್ ಪ್ರಕಾಶ ಸಿಂದಗಿ ಹಾಗೂ ಕೃಷಿ ಇಲಾಖೆಯ ಅಧಿಕಾರಿ ಶರಣಗೌಡ ಬಿರಾದಾರ ಭೇಟಿ ನೀಡಿ ಪರೀಶೀಲನೆ ನಡೆಸಿದ್ದಾರೆ. ವಾಹನ ಸವಾರರಿಗೆ ಸೇತುವೆ ಸಂಚಾರ ಸಂಪೂರ್ಣ ಬಂದು ಮಾಡಿ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ. ಇದೇ ಸಂದರ್ಭದಲ್ಲಿ ತಹಶೀಲ್ದಾರ್ ಪ್ರಕಾಶ ಸಿಂದಗಿ, ಕೃಷಿ ಇಲಾಖೆಯ ಅಧಿಕಾರಿ ಶರಣಗೌಡ ಬಿರಾದಾರ ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಯೂರಿಯಾ ರಸಗೊಬ್ಬರದ ಕೊರತೆಯಾಗದಂತೆ ಕ್ರಮ: ಟಿ.ಎಸ್.ರುದ್ರೇಶಪ್ಪ

**ಕೊಪ್ಪಳ** : ಕೊಪ್ಪಳ ಜಿಲ್ಲೆಯಲ್ಲಿ ಯೂರಿಯಾ ರಸಗೊಬ್ಬರದ ಕೊರತೆಯಾಗದಂತೆ ನಿಘಾವಹಿಸಲಾಗುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಅವರು ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಏಪ್ರಿಲ್ ರಿಂದ 2025ರ ಆಗಸ್ಟ್ 10ರ ವರೆಗೆ ಯೂರಿಯಾ ರಸಗೊಬ್ಬರದ ಬೇಡಿಕೆ 41,511 ಮೆಟ್ರಿಕ್ ಟನ್ ಆಗಿದ್ದು, ಈ ವಿರುದ್ಧ 40,851 ಮೆಟ್ರಿಕ್ ಟನ್ ರಸಗೊಬ್ಬರದ ದಾಸ್ತಾನು ಹೊಂದಲಾಗಿದೆ.

ಇದರಲ್ಲಿ 38,097 ಮೆಟ್ರಿಕ್ ಟನ್ ರಸಗೊಬ್ಬರವನ್ನು ವಿತರಣೆ ಮಾಡಲಾಗಿದೆ. ಇನ್ನುಳಿದ 2,754 ಮೆಟ್ರಿಕ್ ಟನ್ ಯೂರಿಯಾ ರಸಗೊಬ್ಬರ ದಾಸ್ತಾನಾಗಿ ಲಭ್ಯವಿದೆ.

ಇಂಡಿಯನ್ ಪೊಟ್ಯಾಶ್ ಲಿಮಿಟೆಡ್ ಜಿಲ್ಲೆಗೆ 1,306 ಮೆಟ್ರಿಕ್ ಟನ್ ಯೂರಿಯಾ ರಸಗೊಬ್ಬರ ಹಂಚಿಕೆಯಾಗಿದ್ದು, ಇದರಲ್ಲಿ ಸೊಸೈಟಿಗಳಿಗೆ 544.90 ಮೆಟ್ರಿಕ್ ಟನ್ ಹಾಗೂ ಡೀಲರ್ಸ್‌ಗಳಿಗೆ 761 ಮೆಟ್ರಿಕ್ ಟನ್ ಪೂರೈಸಲಾಗಿದೆ. ಜಿಲ್ಲಾ ಮಟ್ಟದ ಮತ್ತು ತಾಲೂಕ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯರಾದ ತಹಶೀಲ್ದಾರ್,

ತಾಲೂಕ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ಕೃಷಿ ನಿರ್ದೇಶಕರು ಹಾಗೂ ಸಹಾಯಕ ತೋಟಗಾರಿಕಾ ನಿರ್ದೇಶಕರ ಉಸ್ತುವಾರಿಯಲ್ಲಿ ರಸಗೊಬ್ಬರ ವಿತರಣೆ ಮಾಡಲಾಗುತ್ತಿದೆ.

ಯೂರಿಯಾ ರಸಗೊಬ್ಬರದ ಪೂರೈಕೆ ಹಂತ ಹಂತವಾಗಿ ಸಾಗುತ್ತಿದ್ದು, ಮುಂದಿನ ದಿನಗಳಲ್ಲಿ 5,000 ಮೆಟ್ರಿಕ್ ಟನ್ ಆರ್.ಸಿ.ಎಫ್., ಎಂ.ಎಫ್.ಎಲ್., ಐಪಿಎಲ್, ಜಿ.ಎಸ್.ಎಫ್.ಸಿ. ಕಂಪನಿಗಳಿಂದ ಇನ್ನೂ ಹೆಚ್ಚಿನ ಪೂರೈಕೆ ಮಾಡಲು ಕ್ರಮ ವಹಿಸಲಾಗಿದೆ. ರಸಗೊಬ್ಬರಗಳನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡುವುದು ಅಥವಾ ಅನಧಿಕೃತವಾಗಿ ದಾಸ್ತಾನು ಮಾಡಿದರೆ ಕೃಷಿ ಇಲಾಖೆ, ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆಗೆ ದೂರನ್ನು ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

# ಪ್ರವಾಹದ ಮುನ್ನೆಚ್ಚರಿಕೆ ವಹಿಸಿ: ಸಿಇಒ ರಿಷಿ ಆನಂದ



**ತಿಕೋಟಾ :** ಬಬಲೇಶ್ವರ ಹಾಗೂ ತಿಕೋಟಾ ತಾಲ್ಲೂಕಿನ ದಾಶ್ಯಾಳ, ಸಾರವಾಡ ಹಾಗೂ ದದಾಮಟ್ಟಿ ಗ್ರಾಮಗಳಲ್ಲಿ ಸ್ವಚ್ಛವಾಹಿನಿ ಮತ್ತು ಡಂಗುರ ಸಾರುವ ಮೂಲಕ ಪ್ರವಾಹದಿಂದ ಸುರಕ್ಷಿತವಾಗಿರಲು ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಹೇಳಿದರು.

ತಿಕೋಟಾ ಮತ್ತು ಬಬಲೇಶ್ವರ ತಾಲ್ಲೂಕಿಗೆ ಗುರುವಾರ ಭೇಟಿ ನೀಡಿ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿ ಮಾತನಾಡಿದ ಅವರು, ತಿಕೋಟಾ ಪಟ್ಟಣದ ಕೆ.ಜಿ.ಎಸ್ ಶಾಲೆಗೆ ಭೇಟಿ ನೀಡಿ, ಶಾಲೆಯ ಮೂಲ ಸೌಕರ್ಯಗಳನ್ನು ವೀಕ್ಷಿಸಿದರು, ಶಿಥಿಲಾವಸ್ಥೆಗೊಂಡಿರುವ ಶಾಲಾ ಕೊಠಡಿಗಳಲ್ಲಿ ಮಕ್ಕಳಿಗೆ ಬೋಧನೆ ಮಾಡದೇ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಪಾಠ ಮಾಡಬೇಕು. ವಿದ್ಯಾರ್ಥಿಗಳ ಶಾಲಾ ಶೌಚಾಲಯ ಕಡ್ಡಾಯವಾಗಿ ಬಳಸುವಂತೆ ಚಾಲ್ತಿಯಲ್ಲಿ ಇಡಬೇಕು. ಮುಂಬರುವ ದಿನಗಳಲ್ಲಿ ಮಳೆ ಬರುವ ಸಾಧ್ಯತೆ ಇದೆ. ಯಾವುದೇ ಶಾಲೆ ಆವರಣದಲ್ಲಿ ಮಳೆ ನೀರು ನಿಲ್ಲದಂತೆ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಿಕೊಂಡು, ಎಲ್ಲೆಲ್ಲಿ ದುರಸ್ತಿ ಅವಶ್ಯಕತೆ ಇದೆಯೋ ಅಲ್ಲಿ ಕ್ರಿಯಾಯೋಜನೆ ತಯಾರಿಸಿ, ಇಲಾಖೆಯ ಮೇಲಾಧಿಕಾರಿಗಳಿಗೆ ಸಲ್ಲಿಸಬೇಕು ಎಂದರು.

ಪಟ್ಟಣದಿಂದ ತಾಜಪುರ ಎಚ್. ಗ್ರಾಮ ಪಂಚಾಯಿತಿಗೆ ಹೋಗುವ ರಸ್ತೆಯ ಮಧ್ಯದಲ್ಲಿರುವ ಹಳ್ಳಕ್ಕೆ ಭೇಟಿ ನೀಡಿದ ಸಿಇಒ, ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಹಳ್ಳವನ್ನು ನಿಯಮಾನುಸಾರ ದುರಸ್ತಿ ಮಾಡಲು ಮತ್ತು ಪರಿಹಾರ ಕೈಗೊಳ್ಳುವ ಕ್ರಮಗಳ ಕುರಿತು ನಾಳೆ ಬೆಳಿಗ್ಗೆ ನನಗೆ ವರದಿ ಸಲ್ಲಿಸಬೇಕು ಎಂದು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೋಟ್ಯಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರನಾಳ ಗ್ರಾಮದ ಡೋಣಿ ನದಿ ಬ್ರಿಡ್ಜ್ ಗೆ ಭೇಟಿ ನೀಡಿ ಪರಿಶೀಲಿಸಿದರು. ರೈತರ ಬೆಳೆ ಹಾನಿಯಾಗದಂತೆ ಅದಕ್ಕೆ ಪೂರಕವಾಗಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಗ್ರಾಮ ಪಂಚಾಯಿತಿ ಮತ್ತು ಇಲಾಖಾಧಿಕಾರಿಗಳಿಗೆ ಸೂಚನೆ ನೀಡಿದರು.

ಹೊನವಾಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ ಸಿಇಒ, ಶಾಲಾ ಕೊಠಡಿಗಳಿಗೆ ತೆರಳಿ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು. ಪ್ರಗತಿ ಹಂತದಲ್ಲಿರುವ ಶೌಚಾಲಯ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಬೇಕು. ಅಡುಗೆ ಕೋಣೆ ಕಾಮಗಾರಿಯನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದರು.

ಬಸವಂತರಾಯ ಪ್ರೌಢ ಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಕಾಲ ಕಾಲಕ್ಕೆ ಪರೀಕ್ಷೆಗಳನ್ನು ಏರ್ಪಡಿಸಬೇಕು. ಪರೀಕ್ಷೆಯಿಂದ ವಿದ್ಯಾರ್ಥಿಗಳ ಜ್ಞಾನ ವರ್ಧನೆಗೆ ವಿನೂತನ ಚಟುವಟಿಕೆಗಳನ್ನು ಜರುಗಿಸಬೇಕು. ಪ್ರೌಢಶಾಲೆಗೆ ಖಾಲಿ ಇದ್ದ ಶಿಕ್ಷಕರ ಹುದ್ದೆಗೆ ಪ್ರಸ್ತಾವ ಕೂಡಲೇ ಜಿಲ್ಲಾ ಪಂಚಾಯಿತಿಗೆ ಸಲ್ಲಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚನೆ ನೀಡಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ತಿಕೋಟಾ ತಾಲ್ಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬಸವಂತ್ರಾಯಗೌಡ ಬಿರಾದಾರ, ಬಬಲೇಶ್ವರ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ಜೆ.ಎಸ್.ಪಠಾಣ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರವಿ ಪವಾರ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಮೋದಿನಿ ಬಳೋಲಮಟ್ಟಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಸ್.ಎಸ್. ಮ್ಯಾಗೇರಿ, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಬಸನಗೌಡ ಪಾಟೀಲ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ ಜನಮಟ್ಟಿ, ತಾಲ್ಲೂಕ ಪಂಚಾಯಿತಿಯ ಸಹಾಯಕ ನಿರ್ದೇಶಕರು (ಗ್ರಾ.ಉ) ಬಸವರಾಜ ಸಂಕಗೊಂಡ, ಸೆಕ್ಷನ್ ಇಂಜಿನಿಯರ್ ಪ್ರಶಾಂತ ಹೆಬ್ಬಾರೆ, ತಾಲ್ಲೂಕು ಪಂಚಾಯಿತಿ ಲೆಕ್ಕಾಧಿಕಾರಿ ಅನ್ವರ್ ನದಾಫ್, ಶೋಭಾ ಶೀಳಿನ, ಉಮೇಶ ಕನಮಡಿ, ಸಂತೋಷಕುಮಾರ ಬಿರಾದಾರ ಇದ್ದರು.

# ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿ




**ವಿಜಯಪುರ** : ರಾಜ್ಯ ಸರ್ಕಾರ ಆಶಾ ಕಾರ್ಯಕರ್ತೆಯರಿಗೆ 'ಮಾತುಕೊಟ್ಟಂತೆ ನಡೆದುಕೊಳ್ಳಬೇಕು' ಎಂದು ಆಗ್ರಹಿಸಿ ಆಗಸ್ಟ್ 12ರಿಂದ 14ರ ವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಅಹೋರಾತ್ರಿ ಪ್ರತಿಭಟನಾ ಧರಣಿ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ರಾಜ್ಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಎಚ್.ಟಿ. ಹೇಳಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಘೋಷಿಸಿದ ರಾಜ್ಯದ ಗೌರವಧನ ಮತ್ತು ಕೇಂದ್ರದ ಭಾಗಶಃ ಪ್ರೋತ್ಸಾಹ ಧನ ಸೇರಿಸಿ ಮಾಸಿಕ ಕನಿಷ್ಠ 10 ಸಾವಿರ ಗ್ಯಾರಂಟಿಯನ್ನು ಕಳೆದ ಏಪ್ರಿಲ್‌ನಿಂದ ಅನ್ವಯವಾಗುವಂತೆ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

ರಾಜ್ಯಬಜೆಟ್‌ನಲ್ಲಿಎಲ್ಲಾಅಂಗನವಾಡಿಮತ್ತು ಬಿಸಿಯೂಟಕಾರ್ಯಕರ್ತೆಯರಿಗೆ1ಸಾವಿರ ಪ್ರೋತ್ಸಾಹಧನ ಹೆಚ್ಚಳ ಮಾಡಿದಂತೆಯೇ ಎಲ್ಲಾ ಆಶಾ ಕಾರ್ಯಕರ್ತೆಯರಿಗೂ ಸಹ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು.ಆಶಾಕಾರ್ಯಕರ್ತೆಯರು ಕಾರ್ಯನಿರ್ವಹಿಸುವ ಜನಸಂಖ್ಯೆಯ ಮಿತಿಯನ್ನು ಹೆಚ್ಚಿಸುವುದನ್ನು ಕೈಬಿಡಬೇಕು, ಈ ಹೆಸರಲ್ಲಿ ಯಾವುದೇ ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆಯಬಾರದು ಎಂದು ಆಗ್ರಹಿಸಿದರು.

ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆಯ ಅವೈಜ್ಞಾನಿಕ ಮೌಲ್ಯಮಾಪನ ಕೈಬಿಡಬೇಕು, ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರೆಸಬೇಕು, ನಿವೃತ್ತ ಆಶಾಗಳಿಗೆ ಪಶ್ಚಿಮ ಬಂಗಾಳ ಮಾದರಿಯಲ್ಲಿ ಇಡಿಗಂಟು ನೀಡಬೇಕು, ನಗರ ಆಶಾಗಳಿಗೆ 2ಸಾವಿರ ಗೌರವಧನ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

2025ರಜೂನ್,ಜುಲೈನಲ್ಲಿಕೇಂದ್ರಸರ್ಕಾರ ಹೆಚ್ಚಿಸಿದ ಪ್ರೋತ್ಸಾಹ ಧನವನ್ನು ರಾಜ್ಯದಲ್ಲಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಆಶಾ ಮುಖಂಡರಾದ ಲಕ್ಷ್ಮೀ ಸೀಮಿಕೇರಿ, ಬಸಮ್ಮ ಹೆಳವರ, ಅಂಬಿಕಾ ಒಳಸಂಗ, ಮಲ್ಲಮ್ಮ ಹರಿಜನ, ಸುಮಂಗಲಾ ಪಡಸಾಲಿ, ಬಸಮ್ಮ ಪಾಟೀಲ, ಮಲ್ಲಮ್ಮ ಕಂಠಿ, ಸಂಘಟನಾಕಾರರಾದ ಶಿವಬಾಳಮ್ಮ ಕೊಂಡಗೂಳಿ, ಶಿವರಂಜನಿ ಎಸ್.ಬಿ. ಇದ್ದರು.

## ಸ್ವಾತಂತ್ರ್ಯೋತ್ಸವ ಅದ್ದೂರಿ ಆಚರಣೆ ನಿರ್ಧಾರ: ತಹಶೀಲ್ದಾರ್ ಸಿಂದಗಿ



**ದೇವರಹಿಪ್ಪರಗಿ** : ಅದ್ದೂರಿ ಸ್ವಾತಂತ್ರ್ಯೋತ್ಸವ ಆಚರಣೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ತಹಶೀಲ್ದಾರ ಪ್ರಕಾಶ ಸಿಂದಗಿ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ವಾತಂತ್ರೋತ್ಸವದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಮಾತನಾಡಿದರು. ತಾಲೂಕಿನಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಹಾಗೂ ಮಾಜಿ ಯೋಧರನ್ನು ಈ ಬಾರಿ ಆಚರಣೆ ವೇಳೆ ಸನ್ಮಾನಿಸಬೇಕು ಎಂದು ಹೇಳಿದರು. ರಾಷ್ಟ್ರೀಯ ಹಬ್ಬದ ವೇಳೆ ಅಂಥ ಮಹನೀಯರಿಗೆ ಗೌರವಿಸುವುದು ಅತಿ ಅವಶ್ಯವಿದೆ. ತಾಲೂಕಿನಲ್ಲಿರುವ ಅವರ ಹೆಸರು ನೀಡಿ, ಗೌರವಿಸಲು ಸಹಕರಿಸಬೇಕು, ಸ್ವಾತಂತ್ರ್ಯೋತ್ಸವ ದಿನದಂದು ನಡೆಯುವ ಪರೇಡ್ ಅಚ್ಚುಕಟ್ಟಾಗಿ ನಡೆಯುವಂತಾಗಬೇಕು. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಗಮನಹರಿಸಬೇಕು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು. ಈ ಸಂತಸದ ಕ್ಷಣಕ್ಕೆ ಸಾರ್ವಜನಿಕರು ತಮ್ಮ ಮಕ್ಕಳು, ಬಂಧುಗಳೊಂದಿಗೆ ಸಾಕ್ಷಿಯಾಗಬೇಕು ಎಂದು ಕೋರಿದರು.

ಸ್ವಾತಂತ್ರ್ಯ ದಿನೋತ್ಸವದ ಸಿದ್ಧತೆಗೆ ಸಂಬಂಧಿಸಿದಂತೆ ನಡೆದ ಪೂರ್ವಭಾವಿ ಸಿದ್ಧತಾ ಸಭೆಗೆ ಗೈರಾಗಿರುವ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿ, ಅಂಥವರ ವಿರುದ್ಧ ಕ್ರಮ ವಹಿಸಲು ಸರಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಹಲವಾರು ಮುಖಂಡರು ಮಾತನಾಡಿ ಅಧಿಕಾರಿಗಳಿಗೆ ಮನವಿ ಮಾಡಿದರು.

**ಕಾರ್ಯಕ್ರಮದ ವಿವಿಧ ಸಮಿತಿಗಳನ್ನು ರಚಿಸಲು ಸೂಚಿಸಲಾಯಿತು.**

ತಾ.ಪಂ ಭಾರತಿ ಚಲುವಯ್ಯ, ಸಿಂದಗಿ ಬಿ.ಇ.ಓ ಎಮ್.ಬಿ.ಯಡ್ರಾಮಿ, ಪ.ಪಂ. ಮುಖ್ಯಾಧಿಕಾರಿ ಸುರೇಖಾ ಬಾಗಲಕೋಟ, ಪಿ.ಎಸ್.ಐ ಸಚಿನ್ ಆಲಮೇಲಕರ,ಪಿಡಬ್ಲ್ಯೂಡಿಎಇಇಅರುಣಕುಮಾರ ವಡಿಗೇರಿ, ಕಂದಾಯ ಶಿರಸ್ತೆದಾರ ಸುರೇಶ ಮ್ಯಾಗೇರಿ, ಬಿಸಿ ಊಟದ ಅಧಿಕಾರಿಗಳಾದ ಅರವಿಂದ ಡೋಣೂರ, ಸಂಗಮೇಶ ಗ್ವಾಳೇದ, ಪ.ಪಂ ಅಧ್ಯಕ್ಷರ ಪ್ರತಿನಿಧಿ ಬಸವರಾಜ ದೇವಣಗಾಂವ, ಪ.ಪಂ ಸದಸ್ಯರುಗಳಾದ ಕಾಸುಗೌಡ ಜಲಕತ್ತಿ, ಕಾಶೀನಾಥ ಭಜಂತ್ರಿ, ಕಸಾಪ ಅಧ್ಯಕ್ಷ ಜೆ.ಪಿ.ಬಿರಾದಾರ, ಮುಖಂಡರುಗಳಾದ ಪ್ರಕಾಶ ಮಲ್ಲಾರಿ, ಕಾಶೀನಾಥ ತಳಕೇರಿ, ಸಿ.ಕೆ. ಕುದರಿ, ಅಜೀಜ ಯಲಗಾರ, ಸಿದ್ದು ಮೇಲಿನಮನಿ, ಬಸು ತಳಕೇರಿ, ಸಿದ್ದು ಮೇಲಿನಮನಿ, ಬೀರು ಹಳ್ಳಿ, ರಾಮು ದೇಸಾಯಿ, ವಿಜಯಕುಮಾರ ಯಂಬತ್ನಾಳ, ರಾಜು ಸಿಂದಗೇರಿ ಸೇರಿದಂತೆ ತಾಲೂಕು ಹಂತದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಸೇತುವೆ ಜಲಾವೃತ: ಸಂಚಾರ ಸ್ಥಗಿತ

**ತಾಳಿಕೋಟೆ** : ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಪಟ್ಟಣದಿಂದ ವಿಜಯಪುರಕ್ಕೆ ತೆರಳುವ ರಾಜ್ಯ ಹೆದ್ದಾರಿಯಲ್ಲಿರುವ ಡೋಣಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯು ಪ್ರವಾಹ ಬಂದು ಗುರುವಾರ ಜಲಾವೃತವಾಯಿತು.

ಪಟ್ಟಣದಿಂದ ಬಸವನ ಬಾಗೇವಾಡಿ, ವಿಜಯಪುರದತ್ತ ಹೋಗುವ ರಾಜ್ಯ ಹೆದ್ದಾರಿ ಸಂಚಾರ ಸ್ಥಗಿತಗೊಂಡಿತು. ಡೋಣಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಮುಖ್ಯಸೇತುವೆಶಿಥಿಲಗೊಂಡಹಿನ್ನೆಲೆಯಲ್ಲಿ ಮರುನಿರ್ಮಾಣಕ್ಕೆ ಪೂರ್ಣವಾಗಿ ತೆಗೆದುಹಾಕಲಾಗಿದೆ.

ಅದಕ್ಕೆ ಸಮಾಂತರವಾಗಿ ಬ್ರಿಟಿಷ್‌ರ ಕಾಲದಲ್ಲಿ ನಿರ್ಮಿಸಿದ ಸೇತುವೆ ಮೇಲೆ ಸಂಚಾರ ನಡೆದಿತ್ತು.

ಈಗ ಪ್ರವಾಹದಿಂದ ಸೇತುವೆಯೂ ಜಲಾವೃತವಾಗಿ ಸಂಚಾರ ಬಂದ್ ಆಗಿದೆ .

ತಾಳಿಕೋಟೆಯಿಂದ ಹಡಗಿನಾಳ ಮಾರ್ಗದಲ್ಲಿ ಇದೇ ಡೋಣಿ ನದಿಗೆ ನಿರ್ಮಿಸಿರುವ ಮೇಲ್ಸೇತುವೆ ಬಳಸಿ



ಮೂಕಿಹಾಳ, ಮಿಣಜಗಿ ಮಾರ್ಗದಲ್ಲಿ 15 ಕಿ.ಮೀ ಸುತ್ತು ಹಾಕಿಕೊಂಡು ವಿಜಯಪುರದತ್ತ ವಾಹನಗಳು ಸಂಚರಿಸಿದವು. ಇದರಿಂದಾಗಿ ಪಟ್ಟಣದ ಹಡಗಿನಾಳ ರಸ್ತೆಯಲ್ಲಿ ವಾಹನಗಳ ದಟ್ಟನೆ ತುಂಬಿತ್ತು.

ಕಳೆದ ಮೂರು ವರ್ಷಗಳಿಂದ ಮಳೆಗಾಲದಲ್ಲಿ ಇದೇ ಬವಣೆಯನ್ನು ಜನತೆ ಎದುರಿಸುತ್ತಿದ್ದಾರೆ. ಶಾಸಕ ಸಿ.ಎಸ್.ನಾಡಗೌಡರು ನೂತನ ಸೇತುವೆ ನಿರ್ಮಾಣಕ್ಕೆ 30 ಕೋಟಿ ಅನುದಾನ ಮಂಜೂರಿಸಿದ್ದು, ಹಳೆಯ ಸೇತುವೆ ಸಂಪೂರ್ಣವಾಗಿ ತೆಗೆದುಹಾಕಲಾಗಿದ್ದು ಮರುನಿರ್ಮಾಣ ಕಾರ್ಯ ನಡೆದಿದೆ.

ಡೋಣಿ ನದಿ ಜಲಾನಯನದಲ್ಲಿ ಕಳೆದೆರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಡೋಣಿ ಎಡಬಲಗಳ ಜಮೀನುಗಳು ಜಲಾವೃತವಾಗಿವೆ.

ಡೋಣಿ ನದಿಯ ಜಲಾನಯನದಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ತಹಶೀಲ್ದಾರ್ ವಿನಯಾ ಹೂಗಾರ ಅವರ ಆದೇಶದಂತೆ ಬುಧವಾರ ಡೋಣಿ ನದಿಯ ಬಳಿ ಪೊಲೀಸ್ ಕಾವಲನ್ನು ಇರಿಸಲಾಗಿತ್ತು. ಗುರುವಾರ ಮಧ್ಯಾಹ್ನ 12 ಗಂಟೆಗೆ ಸೇತುವೆ ಜಲಾವೃತವಾಗುತ್ತಿದ್ದಂತೆ ಡೋಣಿ ನದಿ ಸೇತುವೆ ಮೇಲಿನ ಸಂಚಾರ ಸ್ಥಗಿತಗೊಳಿಸಿ ಪೊಲೀಸ್ ಇಲಾಖೆ ಬ್ಯಾರಿಕೇಡ್ ಹಾಕಿ ಅಪಾಯಕ್ಕೆ ಅವಕಾಶ ಕೊಡದಂತೆ ಮುನ್ನೆಚ್ಚರಿಕೆ ವಹಿಸಿದೆ ಎಂದು ಪಿಎಸ್ಐ (ಅಪರಾಧವಿಭಾಗ) ಆರ್.ಎಸ್.ಭಂಗಿ ತಿಳಿಸಿದರು.

ಪಟ್ಟಣದಲ್ಲಿ ಮಳೆ: ಶ್ರಾವಣ ಶುಕ್ರವಾರದ ಪೂಜೆ ನಿಮಿತ್ತವಾಗಿ ಪೂಜಾ ಸಾಮಗ್ರಿಗಳ ಖರೀದಿಗೆ ಬಂದಿದ್ದ ಗ್ರಾಹಕರಿಗೆ ಗುರುವಾರ ಸಂಜೆ ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದ ಅಡಚಣೆಯಾಯಿತು.

ಬೀದಿಬದಿಯ ವ್ಯಾಪಾರಿಗಳು ತರಕಾರಿ, ಪೂಜಾ ಸಾಮಗ್ರಿಗಳು ಮಳೆ ನೀರ ಪಾಲಾದವು. ಆದರೂ ಸಂಜೆಗೆ ಜಿಟಿಜಿಟಿ ಮಳೆಯಲ್ಲಿಯೇ ಜನತೆ ಸಾಮಗ್ರಿಗಳನ್ನು ಖರೀದಿಸಿದರು.

## ಬಾಲಕಿಯರ ಖೋ ಖೋ ರಾಜ್ಯ ಮಟ್ಟಕ್ಕೆ ಆಯ್ಕೆ

**ಕೊಲ್ಹಾರ** : ಇಲ್ಲಿನ ಶ್ರೀ ಸಂಗಮೇಶ್ವರ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದ ಬಾಲಕಿಯರು ಖೋ ಖೋದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡು ಅ. 22 ರಿಂದ ಹಾಸನದಲ್ಲಿ ನಡೆಯಲಿರುವ ವಿದ್ಯಾಭಾರತಿ ರಾಜ್ಯ (ಪ್ರಾಂತ ) ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಮುಖ್ಯ ಶಿಕ್ಷಕ ರಾಜಶೇಖರ ಉಮರಾಣಿ ತಿಳಿಸಿದ್ದಾರೆ.

ಸಿಂದಗಿ ಜ್ಞಾನಭಾರತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಬಾಲಕಿಯರು ಖೋ ಖೋ, 4100 ಮೀ, 4400 ಮೀ ರಿಲೇ ಪ್ರಥಮ ಹಾಗೂ ವಯಕ್ತಿಕ ಆಟೋಟಗಳಲ್ಲಿ ಪ್ರಥಮ ಹಾಗೂ ದ್ವಿತೀಯ

ಸ್ಥಾನಗಳನ್ನು ಪಡೆದುಕೊಂಡು ರಾಜ್ಯ ಮಟ್ಟದ ವಿದ್ಯಾಭಾರತಿ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.




ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರನ್ನು ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಬಿ ಯು ಗಿಡ್ಡಪ್ಪಗೋಳ, ಕಾರ್ಯದರ್ಶಿ ಎಸ್ ಬಿ ಪತಂಗಿ ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಮತ್ತು ಶಾಲಾ ಮುಖ್ಯ ಗುರುಗಳು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ತೊಗರಿ ಬೆಳೆಗೆ ಗೊಡ್ಡು ರೋಗದ ಬಾಧೆ: ಅನ್ನದಾತರಲ್ಲಿ ಆತಂಕ

**ಮುದ್ದೇಬಿಹಾಳ** : ತಾಲ್ಲೂಕಿನಲ್ಲಿ ಪ್ರಸಕ್ತ ಮುಂಗಾರು ಒಳ್ಳೆಯ ರೀತಿಯಲ್ಲಿ ಆಗಿದೆ ಎಂದು ಖುಷಿಯಿಂದ ಬಿತ್ತನೆ ಮಾಡಿದ್ದ ತೊಗರಿ ಬೆಳೆಗೆ ಗೊಡ್ಡು ರೋಗದ ಬಾಧೆ ಕಂಡು ಬಂದಿದ್ದು, ಅನ್ನದಾತರನ್ನು ಆತಂಕಕ್ಕೆ ದೂಡಿದೆ.

ತಾಲ್ಲೂಕಿನ ಸರೂರು ಗ್ರಾಮದ ಈರಯ್ಯ ಹಿರೇಮಠ, ಸಂತೋಷ ನಾಯ್ಕೋಡಿ, ಶಂಕ್ರಪ್ಪ ನಾಯ್ಕೋಡಿ, ಯಮನಪ್ಪ ನಾಯ್ಕೋಡಿ, ಸಿದ್ದಪ್ಪ ಬಪ್ಪರಗಿ, ಯಲ್ಲಪ್ಪ ಬಪ್ಪರಗಿ ಅವರ ಜಮೀನುಗಳಲ್ಲಿ ಗೊಡ್ಡು ರೋಗ ಕಾಣಿಸಿಕೊಂಡಿರುವುದು ಕೃಷಿ ಇಲಾಖೆ ಅಧಿಕಾರಿಗಳ ಭೇಟಿ ಸಮಯದಲ್ಲಿ ಪತ್ತೆಯಾಗಿದೆ.

ಇಲಾಖೆಯ ಅಧಿಕಾರಿಗಳ ಮಾಹಿತಿಯಂತೆ ತೊಗರಿ ಬೆಳೆಯಲ್ಲಿ ಗೊಡ್ಡು ರೋಗ ಬರಲು ಪಿ.ಪಿ.ಎಸ್.ಎಂ ಕಾರಣವಾಗಿದ್ದು, ಏರಿಯೋಫಿಡ್ ಎಂಬ ಮೈಟ್ ನುಸಿ ಹರಡಿಸುತ್ತದೆ.

**ಗೊಡ್ಡು ರೋಗದ ಲಕ್ಷಣಗಳು:**

ತೊಗರಿ ಬೆಳೆಗೆ ರೋಗ ಬಂದ ನಂತರ ಗಿಡಗಳು ಸಣ್ಣ ಗಾತ್ರದ ಮೇಲ್ಭಾಗದಲ್ಲಿ ತಿಳಿ



ಮತ್ತು ದಟ್ಟ ಹಳದಿ ಬಣ್ಣದ ಮೋಸಾಯಿಕ್ ತರಹದ ಮಚ್ಚೆಗಳನ್ನು ಹೊಂದಿ ಮುರುಟಿಕೊಂಡಿರುವ, ಹೆಚ್ಚಿನ ಸಂಖ್ಯೆಯ ಎಲೆಗಳನ್ನು ಹೊಂದಿ ಹೂ ಕಾಯಿಗಳಿಲ್ಲದೇ ಗೊಡ್ಡಾಗಿ ಉಳಿಯುತ್ತವೆ.

ಬೆಳೆಯ ಎಳೆಯ ವಯಸ್ಸಿನಲ್ಲಿ ಈ ರೋಗ ಬಂದರೆ ಕಾಂಡವು ಉದ್ದವಾಗಿ ಬೆಳೆಯದೆ ಸಣ್ಣಟೊಂಗೆಗಳುಹಾಗೂತಿಳಿಹಳದಿಬಣ್ಣದ ಚಿಕ್ಕ ಗಾತ್ರದ ಮುರುಟಿಕೊಂಡಿರುವ ಎಲೆಗಳ ಗುಂಪಿನಿಂದ ಕೂಡಿ ಪೊದೆಯಂತಾಗಿ ಇಡೀ ಗಿಡವೇ ಕಾಯಿ ಹೂ ಬಿಡದೇ ಗೊಡ್ಡು ಆಗುವುದು. ಈ ರೋಗ ಬೆಳೆಗೆ ಆವರಿಸಿದರೆ ಶೇ 30ರಷ್ಟು ಇಳುವರಿಗೆ ಹಾನಿ ಮಾಡುತ್ತದೆ ಎಂಬುದು ಕೃಷಿ ಇಲಾಖೆಯ ಅಧಿಕಾರಿಗಳ ಹೇಳಿಕೆ.

ನಿರ್ವಹಣೆ ಹೇಗೆ: ತೊಗರಿಗೆ ಗೊಡ್ಡು ರೋಗ ಬಂದ ಗಿಡಗಳನ್ನು ಕಿತ್ತು ನಾಶ ಮಾಡಬೇಕು. ರೋಗಾಣುವಿನ ಆಸರೆ ಸಸ್ಯಗಳಾದ ಬಹುವಾರ್ಷಿಕ ತೊಗರಿ ಮತ್ತು ಕೂಳೆ ತೊಗರಿ ಬೆಳೆಯನ್ನು ಕಿತ್ತು ನಾಶ ಮಾಡಬೇಕು. ನುಸಿ ನಾಶಕಗಳಾದ ಆಕ್ಸಿಡೆಮಟಾನ್ ಮಿಥೈಲ್ 1.5 ಮಿ. ಲೀ. ಅಥವಾ ಸ್ಪೇರೋಮಿಸಿಫನ್ ಅಥವಾ ಫೇನಜಾಕ್ವೀನ್ 1 ಮಿ. ಲೀ . ಪ್ರತಿ ಲೀಟರ್ ನೀರಿಗೆ ಬೆರೆಸುವುದರೊಂದಿಗೆ ನೀರಿನಲ್ಲಿ ಹಾಕಿ ಸಿಂಪಡಿಸಬೇಕು. ಅವಶ್ಯಕತೆ ಇದ್ದಲ್ಲಿ 15 ದಿನಗಳ ನಂತರ ಪುನಃ ಸಿಂಪಡಣೆ ತೆಗೆದುಕೊಳ್ಳಬೇಕು ಎಂದು ಕೃಷಿ ಇಲಾಖೆ ಅಧಿಕಾರಿ ಸೋಮನಗೌಡ ಬಿರಾದಾರ ಮಾಹಿತಿ ನೀಡಿದ್ದಾರೆ.

# ಕೃಷ್ಣಾ ಆರತಿ ನಡೆಯುವ ಸ್ಥಳ ಪರಿಶೀಲಿಸಿದ ದೇವಗಿರಿ ಬಾಬಾ

**ಜಮಖಂಡಿ** : ತಾಲೂಕಿನ ಹಿಪ್ಪರಗಿ ಗ್ರಾಮದ ಸಂಗಮೇಶ್ವರ ಮಹಾರಾಜರ ಸನ್ನಿಧಿ ಉತ್ತರವಾಹಿನಿ ಕೃಷ್ಣಾ ತೀರದಲ್ಲಿ ಆಗಸ್ಟ 16 ಶನಿವಾರದಂದು ಎಂಆರ್‌ಎನ್ ಫೌಂಡೇಷನ್ ಹಾಗೂ ರೈತರ ನೇತೃತ್ವದಲ್ಲಿ ನಡೆಯಲಿರುವ ಶ್ರೀಕೃಷ್ಣ ಜನ್ಮಾಷ್ಠಮಿ , ಕೃಷ್ಣಾ ಪುಣ್ಯಸ್ನಾನ, ಕೃಷ್ಣಾರತಿ, ಕುಂಭ ಮೇಳ ಹಾಗೂ ಮಾಜಿ ಸಚಿವ ಮುರುಗೇಶ ನಿರಾಣಿ ಅವರಹುಟ್ಟುಹಬ್ಬಕಾರ್ಯಕ್ರಮದ ಸ್ಥಳವನ್ನು ಉತ್ತರ ಪ್ರದೇಶದ ಜುನಾ ಅಖಾಡಾದ ಮುಖ್ಯಸ್ಥರು ಹಾಗೂ ಪ್ರಯಾಗರಾಜದಲ್ಲಿ ನಡೆದ ಮಹಾ ಕುಂಭಮೇಳದ ಉಸ್ತುವಾರಿಗಳಾಗಿದ್ದ ದೇವಗಿರಿ ಬಾಬಾ ಅವರು ಬುಧವಾರ ವೀಕ್ಷಣೆ ಮಾಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತ ಪುಣ್ಯಭೂಮಿ, ಇಲ್ಲಿಯ ನದಿಗಳು ಜೀವ ವಾಹಿನಿಗಳು, ಗಂಗೆಯಷ್ಟೇ ಪವಿತ್ರವಾಗಿರುವ ಕೃ?ಷ್ಣಾ ನದಿಗೆ ಆರತಿ, ಪುಣ್ಯಸ್ನಾನ, ಕುಂಭ ಮೇಳ ಏರ್ಪಡಿಸಿದ್ದು ಈ ಭಾಗದ ಜನರ ಭಾಗ್ಯವಾಗಿದೆ. ಹಿಮಾಲಯದಲ್ಲಿ ಕಠಿಣ ತಪಸ್ಸು ಆಚರಿಸುತ್ತ ಗುಹೆಗಳಲ್ಲಿ ವಾಸ ಮಾಡುವ ಅಘೋ–ರಿಗಳು, ನಾಗಾ ಸಾಧುಗಳು,



ಹಂಸರು, ಪರಮಹಂಸರು, ಹಠಯೋಗಿಗಳು ಈ ಪುಣ್ಯಸ್ಥಳಕ್ಕೆ ಆಗಮಿಸಲಿದ್ದಾರೆ.

ಅವರ ಬರುವಿಕೆಯಿಂದ, ಅವರ ದರ್ಶನ ಆಶೀರ್ವಾದದಿಂದ ಸಮಸ್ತ ಜನತೆಗೆ ಒಳ್ಳೆಯದಾಗಲಿದೆ ಎಂದು ಹೇಳಿದರು. ಅಂತಹ ಸಾಧು, ಸಂತರ ಪಾದ ಸ್ಪರ್ಷದಿಂದ ಇಲ್ಲಿನ ಪ್ರದೇಶವು ಪಾವನವಾಗಲಿದೆ.ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಹಾತ್ಮರ ದರ್ಶನ, ಆಶೀರ್ವಾದ ಪಡೆಯಬೇಕು ಎಂದು ಹೇಳಿದರು.

ಉದ್ಯಮಿ ಸಂಗಮೇಶ ನಿರಾಣಿ ಮಾತನಾಡಿ ಆಗಸ್ಟ 16 ರಂದು ಸುಮಾರು ಇನ್ನೂರಕ್ಕೂ ಹೆಚ್ಚು ದೇವರ ಪಲ್ಲಕ್ಕಿಗಳು, ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿ ಗಂಗಾ ಆರತಿ ಮಾಡುವ ಪಂಡಿತರ ತಂಡಗಳು, ಪ್ರಧಾನ ಅರ್ಚಕರು ಸೇರಿದಂತೆ ಅನೇಕ ಸ್ವಾಮಿಗಳು, ನಾಗಾ ಸಾಧುಗಳು, ಅಘೋ–ರಿಗಳು ಆಗಮಿಸಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ಭರತನಾಟ್ಯ ತಂಡಗಳ ಕಲಾವಿದರು, ಸಂಗೀತ ಕಲಾವಿದರು,ಭಾಗವಹಿಸಲಿದ್ದಾರೆ. ಸಂಜೆ ಆರು ಗಂಟೆಗೆ ಆರತಿ ಕಾರ್ಯಕ್ರಮ ನಡೆಯಲಿದೆ. ನಾಗಾಸಾಧುಗಳು ಕುಂಭ ಮೇಳ ಮಾದರಿಯಲ್ಲಿ ಕೃಷ್ಣಾ ಪುಣ್ಯಸ್ನಾನ (ಶಾಹಿಸ್ನಾನ) ಮಾಡಲಿದ್ದಾರೆ. ರಾಜ್ಯಹಾಗೂಕೇಂದ್ರದಿಂದಅನೇಕ ಗಣ್ಯಮಾನ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆಯ ಸಂಪೂರ್ಣ ಅನುಷ್ಠಾನ ಆಗಬೇಕಿದೆ ನಮ್ಮ ಪಾಲಿನ 150 ಟಿಎಂಸಿ ನೀರಿನ್ನು ಬಳಸಿಕೊಳ್ಳಬೇಕಿದೆ. ಉತ್ತರ ಕರ್ನಾಟಕದ ಜೀವ ನದಿಯಾಗಿರುವ ಕೃಷ್ಣೆಗೆ ಗೌರವ ಸಲ್ಲಿಸಬೇಕಿದೆ.

ಏತನೀರಾವರಿ ಯೋಜನೆಗಳಿಂದ ಹದಿನೈದು ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಕೆಲಸವಾಗಬೇಕಿದೆ. ಅದಕ್ಕಾಗಿ ಸರ್ಕಾರಗಳ ಗಮನ ಸೆಳೆಯುವ ಕೆಲಸವು ಈ ಸಂದರ್ಭ ದಲ್ಲಿ ನಡೆಯಬೇಕಿದೆ ಎಂದು ಹೇಳಿದರು. ಇದರಿಂದ ಹನ್ನೆರಡೂ ತಿಂಗಳು ನಮ್ಮ ರೈತಾಪಿ ವರ್ಗಕ್ಕೆ ನೀರಾವರಿ ಸೌಲಭ್ಯದೊರೆಯಲಿದೆ ಎಂದು ವಿವರಿಸಿದರು.

ಹಿಪ್ಪರಗಿಯ ಪ್ರಭುಜೀ ಮಹಾರಾಜರು, ಸಿಪಿಐ ಮಲ್ಲಪ್ಪ ಮಡ್ಡಿ, ಗ್ರಾಮೀಣ ಪಿಎಸ್‌ಐ ಪೂಜಾರ,ಪಿ.ಆರ್.ಪಾಲಬಾಂವಿ, ಈಶ್ವರ ಕರಿಬಸಣ್ಣವರ, ಮಂಡಲೀಕಗೌಡ ಪಾಟೀಲ, ಸೋಮನಾಥಗೌಡ ಪಾಟೀಲ, ಚಂದ್ರಶೇಖರ ಆದಬಸಪ್ಪಗೋಳ, ಶಂಕರಗೌಡ ಪಾಟೀಲ, ಶಂಕರ ಕಿತ್ತೂರ, ಭೀಮಪ್ಪ ಹನಗಂಡಿ, ಗೊಳಪ್ಪಣ್ಣ ಶಿವಪೂಜಿ, ಸಂಗಪ್ಪ ಬಾಗೇವಾಡಿ, ಮಹದೇವ ಕಲ್ಯಾಣಿ, ದಾನಪ್ಪಗೋಳ, ರಾಚಯ್ಯ ಬಂದ್ರದ, ವೆಂಕಟೇಶ ಜಂಬಗಿ ಮುಂತಾದವರಿದ್ದರು.

# ಎಐಸಿಸಿ ಅಧ್ಯಕ್ಷ ಖರ್ಗೆ ಹೇಳಿಕೆಗೆ ಮಾಜಿ ಸಂಸದ ಜಾಧವ್ ತಿರುಗೇಟು

**ಕಲಬುರಗಿ** : 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ತಮ್ಮ ಸೋಲಿಗೆ ಮತಗಳ್ಳತನವೇ ಕಾರಣ ಎಂದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಕಲಬುರಗಿ ಮಾಜಿ ಸಂಸದ ಡಾ.ಉಮೇಶ್ ಜಾಧವ್ ತಿರುಗೇಟು ನೀಡಿದ್ದಾರೆ.



ಮತಗಳ್ಳತನದ ಕಾರಣದಿಂದಲೇ 2019ರಲ್ಲಿ ತಾವು ಸೋಲು ಅನುಭವಿಸಬೇಕಾಯಿತು ಎಂಬ ಖರ್ಗೆ ಹೇಳಿಕೆಗೆ ತಿರುಗೇಟು ನೀಡಿದ ಜಾಧವ್, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೋಲು–ಗೆಲುವು ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕಾಗುತ್ತದೆ. ಅದನ್ನು ಒಪ್ಪಿಕೊಳ್ಳದೆ ಪ್ರತಿ ಮತ ಕ್ಷೇತ್ರದಲ್ಲಿ 15 ರಿಂದ 20 ಸಾವಿರ ಬೋಗಸ್ ಮತದಾನ ಆಗಿದೆ ಎಂದರೆ ಅದನ್ನು ಯಾರೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದರು.

“2024ರಲ್ಲಿ ನಡೆದ ಲೋಕಸಭಾ ಚುನಾವಣೆ ಬಗ್ಗೆ ನಾವು ಆರೋಪ ಮಾಡೋದಾದರೆ,ಉಮೇಶ್ ಜಾಧವ್ ಸೋಲಿಗೆ ಕಾರಣ ಏನು ಎಂಬುದು ಎಲ್ಲರಿಗೂ ಗೊತ್ತು” ಎಂದು ಸೂಕ್ಷ್ಮವಾಗಿ ಪ್ರಸ್ತಾಪಿಸಿದರು.

2024ರ ಲೋಕಸಭಾ ಚುನಾವಣೆಯ ವೇಳೆ ಪ್ರತಿ ತಾಲ್ಲೂಕಿನಲ್ಲಿ ಹೆಚ್ಚುವರಿ ಮತದಾನವಾಗಿದೆ. ಅಫಜಲಪುರ –15 ಸಾವಿರ ಚಿತ್ತಾಪುರ 8600 ಕಲಬುರಗಿ ಉತ್ತರ –37204 ಹೆಚ್ಚುವರಿ ಮತದಾನವಾಗಿದ್ದು 43247 ಮತಗಳು ಚಲಾವಣೆಯಾಗಿವೆ. ಕಲಬುರಗಿ ದಕ್ಷಿಣ 15 ಸಾವಿರ, ಜೇವರ್ಗಿ 12 ಸಾವಿರ, ಸೇಡಂ ಕ್ಷೇತ್ರದಲ್ಲಿ10 ಸಾವಿರ ಹೆಚ್ಚುವರಿ ಮತದಾನವಾಗಿದೆ ಎಂದು ಆರೋಪಿಸಿದರು.ಅದರಲ್ಲೂ ಅಲ್ಪಸಂಖ್ಯಾತ ಮತದಾರರು ಹೆಚ್ಚಿರುವ ಕ್ಷೇತ್ರದಲ್ಲೇ ಮತದಾನ ಪ್ರಮಾಣ ಹೆಚ್ಚಾಗಿದೆ ಎಂದು ತೀಕ್ಷ್ಣವಾಗಿ ನುಡಿದರು.

2024ರಲ್ಲಿ ಕಲಬುರಗಿ ಜಿಲ್ಲಾಧಿಕಾರಿ ಯಾರಿದ್ದರು ಎಂಬುದರಿಂದ ಹಿಡಿದು, ಸರ್ಕಾರ ಯಾರದಿತ್ತು ಎಂಬುದು ಎಲ್ಲರಿಗೂ ಗೊತ್ತಿದೆ.2024ರಲ್ಲಿ ನಮಗೆ ಅನ್ಯಾಯವಾಗಿದೆಯೇ ಹೊರತು ಕಾಂಗ್ರೆಸ್ ನವರಿಗೆ ಅಲ್ಲ ಎಂದರು.

1100 ಮತದಾರರಿರುವ ಒಂದು ಮತಗಟ್ಟೆಯಲ್ಲಿ ಶೇ.90ರಷ್ಟು ಮತಗಳು ಒಂದೇ ಕಡೆ ಚಲಾವಣೆಯಾಗಿವೆ.

ಬಹುಶಃ ಖಮರುಲ್ ಇಸ್ಲಾಂ ಅವರು ಇದ್ದಾಗಲೂ ಈ ರೀತಿ ಆಗಿರಲಿಲ್ಲ ಎಂದು ಅಚ್ಚರಿ ವ್ಯಕ್ತಪಡಿಸಿದರು. ಸರ್ಕಾರಿ ಅಧಿಕಾರಿಗಳು ಹಾಗೂ ಮತ ಯಂತ್ರಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಕಾಂಗ್ರೆಸ್ ನಾಯಕರು ಬಳಸಿಕೊಂಡಿದ್ದರಿಂದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವಂತಾಯಿತು ಎಂದರು.”ನಾನು ಸೋಲುವುದಕ್ಕೆ ಕಲಬುರಗಿಯ ಸುಳ್ಳು ಮತದಾರರೇ ಕಾರಣ” ಎಂದು ಡಾ.ಉಮೇಶ್ ಜಾಧವ್ ಗುಡುಗಿದರು.

# ವಿದ್ಯಾರ್ಥಿಗಳು ಹೆತ್ತವರ ಮತ್ತು ಜ್ಞಾನವಿತ್ತವರ ಋಣ ತೀರಿಸಬೇಕು

**ರಬಕವಿ** : ವಿದ್ಯಾರ್ಥಿಗಳು, ಯುವ ಜನತೆ ತಮ್ಮನ್ನು ಹೆತ್ತವರ ಮತ್ತು ತಮಗೆ ಜ್ಞಾನವಿತ್ತವರ ಋಣ ತೀರಿಸಬೇಕೆಂದು ಮಹಾಲಿಂಗಪುರ ಕೆಎಲ್‌ಇ ಕಾಲೇಜಿನ ಉಪನ್ಯಾಸಕ ಶಿವಲಿಂಗ ಸಿದ್ನಾಳ ಹೇಳಿದರು.

ರಬಕವಿಯ ಎಂ. ವಿ. ಪಟ್ಟಣ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಜೀವನಕ್ಕೊಂದು ಗುರಿಯಿಟ್ಟುಕೊಂಡು ನಿರಂತರ ಪರಿಶ್ರಮದಿಂದ ಸಾಧನೆಯತ್ತ ಮುನ್ನುಗ್ಗಬೇಕು. ಏಕಾಗ್ರತೆಯಿಂದ ಗು–ರಿಯ ಕಡೆ ಮಾತ್ರ ದೃಷ್ಟಿ ನೆಡಬೇಕು. ಸಾಧನೆಗೆ ಅಡ್ಡಿಯಾಗುವ ಹಾಳು




ಹವ್ಯಾಸಗಳಿಂದ ದೂರವಿರಬೇಕು. ಕೀಳ–ರಿಮೆ ಕೈಬಿಟ್ಟು ಮೇಲರಿಮೆ ಮೆರೆಯಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಬದಲಾಗದಿದ್ದಲ್ಲಿ ಉಳಿಗಾಲವಿಲ್ಲ.

ಜ್ಞಾನದ ಜೊತೆ ಶಿಸ್ತು ಮತ್ತು ಸಂಸ್ಕಾರದ ನಡೆಯನ್ನು ರೂಢಿಸಿಕೊಂಡು ಉತ್ತಮ ನಾಗರಿಕರೆನಿಸಬೇಕು ಎಂದರು.

ಸಾಹಿತಿ ಎಂ. ಎಸ್. ಬದಾಮಿ ಮಾತನಾಡಿ, ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಕಾಣುವುದಲ್ಲದೇ ನನಸು ಮಾಡಲು ಶತಪ್ರಯತ್ನ ಮಾಡಬೇಕು. ಸಾಧಕರ ಗೆಲುವಿನ ಕಥೆಗಳನ್ನು ಓದಿ ನಿಮ್ಮ ಗೆಲುವಿನ ಕಥೆ ಬರೆಯುವಂತಾಗಲಿ ಎಂದರು.

ಸಂಸ್ಥೆಯ ಚೇರಮನ್ ಬಸವರಾಜ ಯಂಡಿಗೇರಿ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಬಿ. ಎಂ. ಮಟ್ಟಿಕಲ್ಲಿ, ಚಿದಾನಂದ ಸೊಲ್ಲಾಪೂರ, ಪ್ರಾಚಾರ್ಯ ಬಿ. ಎಸ್. ಕಾಂಬಳೆ, ಅರ್ಥಶಾಸ್ತ್ರ ಉಪನ್ಯಾಸಕ ರಾಜೇಶ್ ಪಿ. ನೋಟದ, ಬಸವರಾಜ ದುಂಬಾಳೆ, ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ಎಸ್. ಬಿ. ಬೇಡರಟ್ಟಿ ಮಾತನಾಡಿದರು. ಎಂ. ಕೆ. ಮುರಗೋಡ ಕಾರ್ಯಕ್ರಮ ನಿರ್ವಹಿಸಿದರು.

# ಬಸ್:ಕಾರಿನ ಮಧ್ಯೆ ಮುಖಾಮುಖಿ ಡಿಕ್ಕಿ: ತಂದೆ–ಮಗ ಸಾವು

**ಕಲಬುರಗಿ** : ಎನ್‌ಇಕೆಆರ್ಟಿಸಿ ಬಸ್ ಮತ್ತು ಕಾರಿನ ಮಧ್ಯೆ ಮುಖಾಮುಖಿ ಡಿಕ್ಕಿ ಸಂಭವಿಸಿ ಕಾರಿನಲ್ಲಿದ್ದ ತಂದೆ ಮತ್ತು ಮಗ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಅಫಜಲಪುರ ರಾಷ್ಟ್ರೀಯ ಹೆದ್ದಾರಿಯ ಗೊಬ್ಬೂರ (ಕೆ) ಗ್ರಾಮದ ಬಳಿ ರವಿವಾರ ಸಂಜೆ ನಡೆದಿದೆ.



ಬಾಗಲಕೋಟೆ ಜಿಲ್ಲೆಯ ಬೀಳಗಿಯ ಸೋಮಶೇಖರ್ (55) ಪ್ರಕಾಶ್ (28) ಸ್ಥಳದಲ್ಲೇ ಮೃತಪಟ್ಟಿದ್ದು, ಮೃತ ಪ್ರಕಾಶ್ ಅವರ ತಾಯಿ ರೂಪಾ ( 48) ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಕಲಬುರಗಿ ಜಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಲಬುರಗಿಯಿಂದ ಬೀಳಗಿ ಪಟ್ಟಣಕ್ಕೆ ಕಾರಿನಲ್ಲಿ ತೆರಳುತ್ತಿದ್ದಾಗ ಈ ದುರಂತ ನಡೆದಿದ್ದು, ಬಸ್ ಅಪ್ಪಳಿಸಿದ ರಭಸಕ್ಕೆ ಕಾರಿನ ಮುಂಭಾಗದಲ್ಲಿ ಕುಳಿತಿದ್ದ ತಂದೆ–ಮಗ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ದೇವಲ ಗಾಣಗಾಪುರ ಪೊಲೀಸರು ಘಟನಾ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

“SIHI KAHI” Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State